# MANGALORE INSTITUTE OF TECHNOLOGY & ENGINEERING

(A Unit of Rajalaxmi Education Trust®, Mangalore)

Autonomous Institute affiliated to VTU, Belagavi, Approved by AICTE, New Delhi

Accredited by NAAC with A+ Grade & ISO 9001:2015 Certified Institution




## Course Name : ಸಾಂಸ್ಕೃತಿಕ ಕನ್ನಡ

**Semester : 1st / 2nd**

## Course Code : 23HMCC109

# Module 4

| Module 4: ತಾಂತ್ರಿಕ ವ್ಯಕ್ತಿಗಳ ಪರಿಚಯ | No. of Hrs: 3 |
|---|---|
| ಡಾ. ಸರ್ . ಎಂ. ವಿಶ್ವೇಶ್ವರಯ್ಯ : ವ್ಯಕ್ತಿ ಮತ್ತು ಐತಿಹ್ಯ – ಎ.ಎನ್.ಮೂರ್ತಿರಾವ್<br><br>ಪೂರಕ ಓದು: ಕರಕುಶಲ ಕಲೆಗಳು ಮತ್ತು ಪರಂಪರೆಯ ವಿಜ್ಞಾನ - ಕರೀಗೌಡ ಬೀಚನಹಳ್ಳಿ | |

ಡಾ. ಸರ್ . ಎಂ. ವಿಶ್ವೇಶ್ವರಯ್ಯ : ವ್ಯಕ್ತಿ ಮತ್ತು ಐತಿಹ್ಯ – ಎ.ಎನ್.ಮೂರ್ತಿರಾವ್

ಕೆಲವು ವರ್ಷಗಳ ಹಿಂದೆ ಬೆಂಗಳೂರಿನಿಂದ ಮೈಸೂರಿಗೆ ಪ್ರಯಾಣ ಮಾಡುತ್ತಿದ್ದೆ. ಬಸ್ಸು ಮಂಡ್ಯ ಜಿಲ್ಲೆಯಲ್ಲಿ ಹೋಗುತ್ತಿದ್ದಾಗ ಆ ಜಿಲ್ಲೆ ಹಿಂದೆ ಇದ್ದ ಸ್ಥಿತಿಯ ನೆನಪಾಯಿತು. ಆಗ ಅದು ಮಳೆ ಸಾಲದೆ, ನೀರಿನ ಸೌಕರ್ಯವಿಲ್ಲದೆ, ಹೆಚ್ಚುಕಡಿಮೆ ಬರಡು ಭೂಮಿಯಾಗಿತ್ತು. ಈಗ ರಸ್ತೆಯ ಇಕ್ಕೆಲದಲ್ಲೂ ಕಣ್ಣಿಗೆ ಕಾಣುವಷ್ಟು ದೂರವೂ ಹಸಿರು ಕಂಗೊಳಿಸುತ್ತದೆ. ಎಲ್ಲಿ ನೋಡಿದರೂ ಭತ್ತದ ಬೆಳೆ; ಕಬ್ಬಿನ ಬೆಳೆ; ಎಲ್ಲಾ ಕಡೆಗಳಿಂದಲೂ ನೀರಿನ ಕಲರವ ಕಿವಿಯನ್ನು ಮುತ್ತುತ್ತದೆ. ನಾನು ಈ ಮಾರ್ಪಾಟನ್ನು ಸವಿಯುವುದರಲ್ಲಿ ಮಗ್ನನಾಗಿದ್ದಾಗ ನನ್ನ ಪಕ್ಕದಲ್ಲಿ ಕುಳಿತಿದ್ದ ಪ್ರಯಾಣಿಕ ಸುತ್ತಣ ಹಸುರಿನ ಕಡೆಗೆ ಕೈಬೀಸಿ ಇಂಗ್ಲಿಷಿನಲ್ಲಿ "All this is Visvesvaraya (ಇವೆಲ್ಲ ವಿಶ್ವೇಶ್ವರಯ್ಯ)" ಎಂದ. ನನ್ನ ಮನಸ್ಸಿನಲ್ಲಿದ್ದ ಯೋಚನೆಯೇ ಆತನ ಬಾಯಿಯಿಂದ ಹೊರಟಿತು. ಸಾಧಾರಣವಾಗಿ ನಾವು "ಇದೆಲ್ಲಾ ವಿಶ್ವೇಶ್ವರಯ್ಯನವರು ಮಾಡಿದ ಕೆಲಸ" ಎಂದು ಹೇಳುವ ಪದ್ಧತಿ. ಆದರೆ ಈ ಸಂದರ್ಭದಲ್ಲಿ ಆತ ಹೇಳಿದ್ದೇ ಸರಿ ಎನ್ನಿಸಿತು.

ಈಗ ವಿಶ್ವೇಶ್ವರಯ್ಯನವರ ಭೌತದೇಹ ನಮ್ಮೊಡನೆ ಇಲ್ಲ. ಆದರೆ ಮಂಡ್ಯ ಜಿಲ್ಲೆಯ ಸೌಂದರ್ಯದಲ್ಲಿ, ಅಲ್ಲಿಯ ಜನರ ಅಭ್ಯುದಯದಲ್ಲಿ, ಅವರು ಜೀವಂತವಾಗಿದ್ದಾರೆ. ಅಂತಹ ಸಂಪತ್ತನ್ನು ಸೃಷ್ಟಿಸಿ ಜನಜೀವನದ ಸೌಖ್ಯವನ್ನು ಹೆಚ್ಚಿಸುವುದೇ ಅವರ ಜೀವದ ಜೀವ. ಆ ಜಿಲ್ಲೆಗೆ ನೀರನ್ನು ಒದಗಿಸುವ ಕೃಷ್ಣರಾಜಸಾಗರವನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡವರು, ಅದರ ಯೋಜನೆಯನ್ನು ತಯಾರಿಸಿದವರು, ಅದನ್ನು ಕಟ್ಟಿಸಿದವರು, ವಿಶ್ವೇಶ್ವರಯ್ಯ. ಅದರ ಪ್ರಯೋಜನವನ್ನು ಪಡೆಯುತ್ತಿರುವವರು ಮಂಡ್ಯದ ರೈತರು ಮತ್ತು ಅವರ ಮೂಲಕ ಮೈಸೂರು ರಾಜ್ಯ. ಅದಕ್ಕಾಗಿಯೇ ನಾವು ಈ ಇಂಜಿನಿಯರ್ - ರಾಜತಂತ್ರಜ್ಞರು ಮಾಡಿದ ಲೆಕ್ಕವಿಲ್ಲದಷ್ಟು ಉಪಕಾರಗಳಲ್ಲಿ ಮೊದಲು ಕೃಷ್ಣರಾಜಸಾಗರವನ್ನು ನೆನೆಯುತ್ತೇವೆ. ನನ್ನ ಆ ಸಹ ಪ್ರಯಾಣಿಕನು ವಿಶ್ವೇಶ್ವರಯ್ಯನವರ ಇತರ ಮಹಾಕಾರ್ಯಗಳನ್ನು - ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಮೈಸೂರು ಬ್ಯಾಂಕು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರಿನ ಚೇಂಬರ್ ಆಫ್ ಕಾಮರ್ಸ್ ಇವುಗಳನ್ನೂ ಸ್ಮರಿಸಿಕೊಂಡ. ಆದರೆ ಕೃಷ್ಣರಾಜ ಸಾಗರದ ಹೆಸರು ಹೇಳಿದ ಮೇಲೆ. ಗಾಂಧೀಜಿ ಒಂದು ಸಾರಿ ಹೇಳಿದರು: ಭಗವಂತ ಮಾನವರಿಗೆ ಕಾಣಿಸಿಕೊಂಡರೆ, ಮೊದಲು ಅನ್ನದ ರೂಪದಲ್ಲಿ ಕಾಣಿಸಿಕೊಳ್ಳಬೇಕು, ಎಂದು. ವಿಶ್ವೇಶ್ವರಯ್ಯನವರು ತಮ್ಮನ್ನು ನಿಮಿತ್ತವಾಗಿ ಮಾಡಿಕೊಂಡು ಮಂಡ್ಯ ಜಿಲ್ಲೆಯಲ್ಲಿ ಅನ್ನಬ್ರಹ್ಮನ ಅವತಾರ ಮಾಡಿಸಿದರು.

ಡಾ. ವಿಶ್ವೇಶ್ವರಯ್ಯನವರು 1919 ರಲ್ಲಿ ಸ್ವಂತ ಇಚ್ಛೆಯಿಂದ ದಿವಾನಗಿರಿಯನ್ನು ಬಿಟ್ಟುಕೊಟ್ಟು ಅಧಿಕಾರದಿಂದ ನಿವೃತ್ತರಾದರು; ಆದರೆ ದೇಶಸೇವೆಯಿಂದ ನಿವೃತ್ತರಾಗಲಿಲ್ಲ. ವರ್ಷಗಟ್ಟಲೆ ಅವರು ಕೃಷ್ಣರಾಜ ಸಾಗರದ ಅಭಿವೃದ್ಧಿ ಸಮಿತಿಯ ಮತ್ತು ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಅಧ್ಯಕ್ಷರಾಗಿ ಕೆಲಸ ಮಾಡಿದರು. ಅವರ ಜೀವನದ ಕೊನೆಯವರೆಗೂ ಕೈಗಾರಿಕೆ ಅಥವಾ ಇಂಜಿನಿಯರಿಂಗ್ ಗೆ ಸಂಬಂಧಪಟ್ಟ ತೊಡಕಾದ ಸಮಸ್ಯೆ ಏನು ಬಂದರೂ ಮೈಸೂರು ರಾಜ್ಯವು ಅವರ ಸಲಹೆಯನ್ನು ಬೇಡುತ್ತಿತ್ತು, ಪಡೆಯುತ್ತಿತ್ತು. ಅವರ ನಂತರ ಬಂದ ದಿವಾನರು ಮತ್ತು ಮಂತ್ರಿಗಳಲ್ಲಿ ಹೆಚ್ಚು ಕಡಿಮೆ ಎಲ್ಲರೂ ಅವರಲ್ಲಿ ಭಕ್ತಿಯಿಂದ ನಡೆದುಕೊಂಡು ಸಲಹೆ ಪಡೆದಿದ್ದಾರೆ. ನಮ್ಮ ರಾಜ್ಯದ ಜನ ಜೀವನದಲ್ಲಿ ಅದೆಷ್ಟೋ ಕಡೆ ಅವರ ಕೈವಾಡ ಕಾಣುತ್ತದೆಯೋ! ಅದಕ್ಕೆ ನಮ್ಮ ಜನ ದೊಡ್ಡದಾಗಿ ಕೈಬೀಸಿ ಹೇಳುತ್ತಾರೆ: "ಇದೆಲ್ಲಾ ವಿಶ್ವೇಶ್ವರಯ್ಯನವರ ಕೆಲಸ" ಎಂದಲ್ಲ, " ಇದೆಲ್ಲಾ ವಿಶ್ವೇಶ್ವರಯ್ಯ" ಎಂದು.

ವಿಶ್ವೇಶ್ವರಯ್ಯನವರು ಸಾಧಿಸಿದ ಕೆಲಸಗಳಷ್ಟೇ – ಬಹುಶಃ ಅವಕ್ಕಿಂತ ಹೆಚ್ಚಾಗಿ – ಅವರ ವ್ಯಕ್ತಿತ್ವ ಜನರ ಮನಸ್ಸನ್ನು ಸೆಳೆದಿದೆ. ಅವರು ಅತ್ಯಂತ ದಕ್ಷರಾದ ಇಂಜಿನಿಯರ್, ಮುಂದಾಲೋಚನೆಯುಳ್ಳ ರಾಜತಂತ್ರಜ್ಞರು, ರಾಜ್ಯದ ಅಭಿವೃದ್ಧಿಯ ವಿಷಯದಲ್ಲಿ ಘನವಾದ ಆದರ್ಶಗಳನ್ನು ಕಲ್ಪಿಸಿಕೊಂಡು ಅವನ್ನು ಸಾಧಿಸಲು ಶ್ರಮಿಸಿದವರು – ಇದೆನ್ನೆಲ್ಲಾ ಒತ್ತಿ ಹೇಳಬೇಕಾದ ಅವಶ್ಯಕತೆಯಿಲ್ಲ. ಇಲ್ಲಿ ಅವರ ವ್ಯಕ್ತಿತ್ವಕ್ಕೆ ಹೆಚ್ಚು ಗಮನ ಕೊಡಲಾಗಿದೆ. ಅವರ ವಿಷಯದಲ್ಲಿ ನಾನು ಕೇಳಿರುವ ಕಥೆಗಳೆಲ್ಲವೂ ಅವರ ಸ್ವಭಾವಕ್ಕೆ ಹೊಂದುವಂಥವೇ.

ವಿಶ್ವೇಶ್ವರಯ್ಯನವರು ಸಾಧಿಸಿದ ಕೆಲಸಗಳಷ್ಟೇ – ಬಹುಶಃ ಅವಕ್ಕಿಂತ ಹೆಚ್ಚಾಗಿ – ಅವರ ವ್ಯಕ್ತಿತ್ವ ಜನರ ಮನಸ್ಸನ್ನು ಸೆಳೆದಿದೆ. ಅವರು ಅತ್ಯಂತ ದಕ್ಷರಾದ ಇಂಜಿನಿಯರ್, ಮುಂದಾಲೋಚನೆಯುಳ್ಳ ರಾಜತಂತ್ರಜ್ಞರು, ರಾಷ್ಟ್ರದ ಅಭಿವೃದ್ಧಿಯ ವಿಷಯದಲ್ಲಿ ಘನವಾದ ಆದರ್ಶಗಳನ್ನು ಕಲ್ಪಿಸಿಕೊಂಡು ಅವನ್ನು ಸಾಧಿಸಲು ಶ್ರಮಿಸಿದವರು. – ಇದೆನ್ನೆಲ್ಲಾ ಒತ್ತಿ ಹೇಳಬೇಕಾದ ಅವಶ್ಯಕತೆಯಿಲ್ಲ. ಇಲ್ಲಿ ಅವರ ವ್ಯಕ್ತಿತ್ವಕ್ಕೆ ಹೆಚ್ಚು ಗಮನ ಕೊಡಲಾಗಿದೆ. ಅವರ ವಿಷಯದಲ್ಲಿ ನಾನು ಕೇಳಿರುವ ಕಥೆಗಳೆಲ್ಲವೂ ಅವರ ಸ್ವಭಾವಕ್ಕೆ ಹೊಂದುವಂಥವೇ.

ಅವರನ್ನು ದಿವಾನರನ್ನಾಗಿ ನೇಮಿಸಿದ ಸರ್ಕಾರಿ ಆಜ್ಞೆ ಕೈಗೆ ಬಂದಾಗ ಅವರು ಅದನ್ನು ತಾಯಿಯ ಪಾದಗಳ ಬಳಿ ಇಟ್ಟು 'ನಮ್ಮ ಬಂಧುಗಳಲ್ಲಿ ಯಾರೊಬ್ಬರಿಗಾಗಲಿ ನೌಕರಿ ಕೊಡಬೇಕೆಂದು ನೀನು ಶಿಫಾರಸು ಮಾಡಬಾರದು; ಮಾಡುವುದಿಲ್ಲವೆಂದು ಭರವಸೆ ಕೊಟ್ಟರೆ ದಿವಾನಗಿರಿಯನ್ನು ಒಪ್ಪಿಕೊಳ್ಳುತ್ತೇನೆ' ಎಂದರಂತೆ. ಈ ಮಾತನ್ನು ಹೇಳಿದ್ದು ಅವರ ತಾಯಿಗಲ್ಲ, ಸೋದರಮಾವನಿಗೆ ಎಂದೂ ಕೇಳಿದ್ದೇನೆ – ಯಾವುದು ನಿಜವೋ ತಿಳಿಯದು. ಆದರೆ ಅವರು ತಮ್ಮ ಬಂಧುಗಳಲ್ಲಿ ಯಾರೊಬ್ಬರಿಗೂ ನೌಕರಿ ಕೊಡಲಿಲ್ಲವೆಂಬುದೇನೋ ಸತ್ಯ.

ಕ್ರಮ, ಶಿಸ್ತು, ತರ್ಕಬದ್ಧವಾದ ಆಲೋಚನೆ, ನಿಷ್ಕೃಷ್ಟತೆ ಇವು ವಿಶ್ವೇಶ್ವರಯ್ಯನವರ ಹುಟ್ಟುಗುಣಗಳು. ಇವುಗಳಿಗೆ ಲೋಪ ಬಂದೀತೆಂಬ ಶಂಕೆಯಿಂದ ಅವರು ಯಾವ ಕೆಲಸಕ್ಕಾಗಲಿ ಪೂರ್ವಸಿದ್ಧತೆಯಿಲ್ಲದೆ ಕೈ ಹಾಕುತ್ತಿರಲಿಲ್ಲ. ಇದಕ್ಕೆ ಉದಾಹರಣೆಯಾಗಿ ಅವರ ಜೀವನದಲ್ಲಿ ನಡೆದ ಒಂದು ಸಂಗತಿಯನ್ನು ಹೇಳಬಹುದು. ಒಂದು ಬಾರಿ ಅವರು ತಮ್ಮ ತವರೂರಾದ ಮುದ್ದೇನಹಳ್ಳಿಯಲ್ಲಿ ತಂಗಿದ್ದರು. ಅಂದು ಸಂಜೆ ಹಳ್ಳಿಯ ಪ್ರಾಥಮಿಕ ಶಾಲೆಯ ಬಳಿ ಹೋಗುತ್ತಿರುವಾಗ ಶಾಲೆಯಿಂದ ಮಕ್ಕಳು ಕೇಕೆಹಾಕುತ್ತ, ನಗುತ್ತ, ಕುಣಿಯುತ್ತ ಹೊರಬಂದರು. ವಿಶ್ವೇಶ್ವರಯ್ಯನವರು ಮಕ್ಕಳ ಕುಣಿದಾಟವನ್ನು ನೋಡಿ ಮುಗುಳುನಗೆ ನಗುತ್ತಾ ಮೇಷ್ಟರನ್ನು ಕರೆದು ಹತ್ತು ರೂಪಾಯಿ ನೋಟನ್ನು ಅವರ ಕೈಲಿಟ್ಟು ‘ಮಕ್ಕಳಿಗೆ ಏನಾದರೂ ತರಿಸಿಕೊಡಿ, ಬಾಯಿ ಸಿಹಿಯಾಗಲಿ’ ಎಂದರು.

ಇದನ್ನು ನೋಡುತ್ತಿದ್ದ ವೃದ್ಧರೊಬ್ಬರು, 'ಸ್ವಾಮಿ ಅವರಿಗೆ ಪೆಪ್ಪರ್ ಮೆಂಟು ಹಂಚಿದರೆ ಸಾಕೆ? ನಾಲ್ಕು ಬುದ್ಧಿಯ ಮಾತೂ ಅಪ್ಪಣೆಯಾಗಬೇಕು' ಎಂದರು. ಹುಡುಗರನ್ನೆಲ್ಲಾ ಮತ್ತೆ ಶಾಲೆಯೊಳಕ್ಕೆ ಕರೆತಂದಾಯಿತು; ವಿಶ್ವೇಶ್ವರಯ್ಯನವರು ಐದು ನಿಮಿಷ ಮಾತನ್ನೂ ಆಡಿದರು. ಆದರೆ ಶಾಲೆಯಿಂದ ಹೊರಗೆ ಬಂದಾಗ ಅವರಿಗೆ ತಮ್ಮ ವಿಷಯದಲ್ಲೇ ವಿಪರೀತ ಅಸಮಾಧಾನ. ಎಂದೂ ಮಾಡದ ಕೆಲಸವನ್ನು ಅಂದು ಮಾಡಿದ್ದರು. ಪೂರ್ವ ಸಿದ್ಧತೆಯಿಲ್ಲದೆ ಭಾಷಣ ಮಾಡಿದ್ದರು! ಅವರ ದೃಷ್ಟಿಯಲ್ಲಿ ಅಕ್ಷಮ್ಯವಾದ ಈ ಅಪರಾಧಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳುವವರೆಗೂ ಅವರಿಗೆ ಸಮಾಧಾನವಿಲ್ಲ. ಒಂದು ವಾರದೊಳಗೆ ಅವರು ಹಳ್ಳಿಗೆ ಹಿಂದಿರುಗಿ, ಇಪ್ಪತ್ತೈದು ರೂಪಾಯಿ ಖರ್ಚು ಮಾಡಿ, ಮಕ್ಕಳಿಗೆ ತಿಂಡಿತೀರ್ಥಗಳನ್ನು ಹಂಚಿ, ಮತ್ತೆ ಒಂದು ಭಾಷಣ ಮಾಡಿದರು. ಅದು ಜಾಗರೂಕತೆಯಿಂದ ತಯಾರು ಮಾಡಿದ್ದ ಭಾಷಣ. ಮೊದಲನೆ ಭಾಷಣಕ್ಕೂ ಎರಡನೆಯದಕ್ಕೂ ವಿಷಯಸಂಪತ್ತಿನಲ್ಲೂ ಸುಸಂಬದ್ಧತೆಯಲ್ಲೂ ಏನು ವ್ಯತ್ಯಾಸವಿತ್ತೋ ತಿಳಿಯದು; ಇದ್ದರೂ ಅದು ಆ ಚಿಕ್ಕಮಕ್ಕಳ ಗಮನಕ್ಕಂತೂ ಬಂದಿರಲಾರದು. ಅವರು ಮಿಠಾಯಿ ತಿಂದು ಬಾಯಿ ಚಪ್ಪರಿಸುತ್ತಾ ಬಟ್ಟಲುಗಣ್ಣು ಬಿಟ್ಟು 'ದಿವಾನರು' ಎಂಬ ವಿಚಿತ್ರ ಅದ್ಭುತ ವ್ಯಕ್ತಿಯನ್ನು ನೋಡುತ್ತಿದ್ದರೇ ಹೊರತು ಭಾಷಣವನ್ನು ಅಷ್ಟಾಗಿ ಕೇಳುತ್ತಿದ್ದಿರಲಾರರು. ಈ ಪ್ರಸಂಗದಲ್ಲಿ ನಾವು ಗಮನಿಸಬೇಕಾದ ಅಂಶ ಇದು: ವಿಶ್ವೇಶ್ವರಯ್ಯನವರು ಮೇಧಾವಿಗಳಾದ ಮತ್ತು ವಿಚಾರಪರರಾದ ಶ್ರೋತೃಗಳಿಗೆ ಎಷ್ಟು ಗೌರವ ಸಲ್ಲಿಸಬೇಕೋ ಅಷ್ಟೇ ಗೌರವವನ್ನು ಆ ಹಸುಮಕ್ಕಳಿಗೂ ಸಲ್ಲಿಸಿದರು.

ಶ್ರೋತೃವರ್ಗದ ವಿಷಯದಲ್ಲಿ ಗೌರವ, ಆಲೋಚನೆಯಲ್ಲಿ ಸತ್ಯನಿಷ್ಠೆ, ಈ ಉದಾತ್ತ ಗುಣಗಳಿಗೆ ಬೆಲೆ ಕೊಡಬೇಕಾದ್ದರಿಂದ ಅವರು ಎಂಥ ಅಮುಖ್ಯ ಸಂದರ್ಭದಲ್ಲಾಗಲಿ ಪೂರ್ವ ಸಿದ್ಧತೆಯಿಲ್ಲದೆ ಮಾತಾಡಲೊಲ್ಲರು. ಆಡಿದ ಮಾತು, ಬರೆದ ಬರಹ, ಯಾವುದರಲ್ಲೂ ಸತ್ಯಕ್ಕೂ ನಿಷ್ಪಕ್ಷಪಾತೆಗೂ ಲೋಪ ಬರಬಾರದು. ಕೆಲವರು ಪ್ರೀತಿಜನ್ಯವಾದ ವಿಷಾದದಿಂದ, 'ಇವರು ತಮ್ಮ ಮಾತಿನಿಂದಲೂ ಬರಹದಿಂದಲೂ ಭಾಷಾಸೌಂದರ್ಯವನ್ನು ನಿರ್ದಯರಾಗಿ ಹೊರದೂಡುತ್ತಾರಲ್ಲ' ಎಂದು ಅತೃಪ್ತಗೊಂಡಿದ್ದಾರೆ. ವಿಶ್ವೇಶ್ವರಯ್ಯನವರು ಹಾಗೆ ಮಾಡುತ್ತಿದ್ದುದ್ದೇನೋ ನಿಜ: ಆದರೆ ಅದು ನಕಾರಾತ್ಮಕ ಕ್ರಿಯೆಯಲ್ಲ. ಅವರ ಉದ್ದೇಶ ಭಾಷಾಸೌಂದರ್ಯವನ್ನು ಹೊರ ಹಾಕಬೇಕೆಂದಲ್ಲ, ಸತ್ಯವನ್ನು ಬರಮಾಡಿಕೊಳ್ಳಬೇಕೆಂದು ಅನೇಕ ವೇಳೆ 'ಭಾಷಾಸೌಂದರ್ಯ' ಎನ್ನಿಸಿಕೊಳ್ಳುವುದು ಸತ್ಯವನ್ನು ಮರೆಸುತ್ತದೆ. ಸುಂದರವಾದ ವಾಗ್ರತ್ನಗಳ ಅಲಂಕಾರ ಮಾಡಿ ಜನರನ್ನು ಮರಳುಮಾಡುವ ಕಲೆ ನಮ್ಮಲ್ಲಿ ಸಾಕಾದಷ್ಟು ಬೆಳೆದಿದೆ! ವಿಶ್ವೇಶ್ವರಯ್ಯನವರಿಗೆ ಸತ್ಯವೇ ಸೌಂದರ್ಯ; ಆದ್ದರಿಂದ ಅದನ್ನು ಅಲಂಕರಿಸಲೊಲ್ಲರು. ಸತ್ಯ ತನ್ನ ಸತ್ಯತೆಯಿಂದಲೇ ಪ್ರಭಾವಶಾಲಿಯಾಗಬಲ್ಲುದೆಂದು ಅವರ ನಂಬಿಕೆ.

'ಡಾ.ವಿಶ್ವೇಶ್ವರಯ್ಯನವರಿಗೆ ಪ್ರಕೃತಿ ಸೌಂದರ್ಯವನ್ನು ಅನುಭವಿಸಿ ಆನಂದ ಪಡೆಯುವ ಮನೋವೃತ್ತಿಯಿಲ್ಲ' ಎಂಬ ಟೀಕೆಯನ್ನು ಇದೇ ದೃಷ್ಟಿಯಿಂದ ಪರಿಶೀಲಿಸಬೇಕು. ನನಗೆ ಹಿರಿಯ ಮಿತ್ರರಾಗಿ

ಗುರುಸ್ಥಾನದಲ್ಲಿರುವವರೊಬ್ಬರು ವಿಶ್ವೇಶ್ವರಯ್ಯನವರನ್ನು ಬಹುಕಾಲದಿಂದ ಚೆನ್ನಾಗಿ ಬಲ್ಲವರು; ಕೆಲವು ಸಂದರ್ಭಗಳಲ್ಲಿ ಕೇವಲ ವಿಶ್ವಾಸಕ್ಕಾಗಿ ಅವರ ಕಾರ್ಯದರ್ಶಿಗಳಾಗಿ ಕೆಲಸ ಮಾಡಿದವರು. ಅವರು ಒಂದು ಸಾರಿ ವಿಶ್ವೇಶ್ವರಯ್ಯನವರೊಡನೆ ಪ್ರವಾಸದಲ್ಲಿದ್ದಾಗ ಕನ್ಯಾಕುಮಾರಿಯಲ್ಲಿ ಸಂಜೆ ಬೆಳಕು ಸಮುದ್ರದ ಮೇಲೆ ಬಿದ್ದು ನಿರ್ಮಿಸಿದ ಸೌಂದರ್ಯವನ್ನು ನೋಡಿ ಭಾವಾವೇಶದಿಂದ ಬಣ್ಣಿಸತೊಡಗಿದರಂತೆ. ವಿಶ್ವೇಶ್ವರಯ್ಯನವರು ನಿಟ್ಟುಸಿರುಬಿಟ್ಟು 'ನೀವು ಕವಿಗಳಾಗಿಬಿಟ್ಟಿರಿ!' ಎಂದರು. ಪ್ರಕೃತಿ ಸೌಂದರ್ಯ ಅವರ ಕಣ್ಣಿಗೆ ಕಾಣಲಿಲ್ಲವೆಂದಲ್ಲ. ಆ ಸೌಂದರ್ಯ ಅಲ್ಲಿ ಇದ್ದೇ ಇದೆ. ಅದಕ್ಕೆ ಆಭರಣ ತೊಡಿಸುವುದರಲ್ಲಿ ನಮ್ಮ ಶಕ್ತಿ ವ್ಯಯವಾಗಬೇಕೆ? ಕಮಲಕ್ಕೆ ಬಣ್ಣ ಬಳಿಯಬೇಕೆ? ಅವರು ನಿಸರ್ಗ ಸೌಂದರ್ಯವನ್ನು ಬಲ್ಲರು; ಆದರೆ ಅದರ ಮುನ್ನೆಲೆಯಲ್ಲಿ ವಿಕಟ ನೃತ್ಯ ಮಾಡುತ್ತಿರುವ ಜನಜೀವನದ ಕಷ್ಟ, ಕಾರ್ಪಣ್ಯ, ದಾರುಣತೆಗಳನ್ನೂ ಬಲ್ಲರು. ಇವು ಅವರ ಹೃದಯವನ್ನು ಶೂಲದಂತೆ ಇರಿದಿವೆ. ನಿಸರ್ಗದ ಸೌಂದರ್ಯವನ್ನು ಜನಜೀವನದಲ್ಲೂ ತರಬೇಕು; ನಮ್ಮ ಗಮನಹರಿಯಬೇಕಾದ್ದು ಅತ್ತಕಡೆಗೆ. ಕಲ್ಪನಾ ಪ್ರಪಂಚದಲ್ಲೂ ಭಾವಪ್ರಪಂಚದಲ್ಲೂ ಇರುವ ಆದರ್ಶವನ್ನು ವಾಸ್ತವ ಪ್ರಪಂಚದಲ್ಲಿ ಸಾಧಿಸಬೇಕೆಂದು ಹಂಬಲಿಸುವ ಕಾರ್ಯವಾಸಿಗಳ ತರ್ಕ ಹೀಗೆ ಸಾಗುವುದೇ ಸ್ವಾಭಾವಿಕ. ವಿಶ್ವೇಶ್ವರಯ್ಯನವರು ಜೋಗ್ ಜಲಪಾತದ ಅದ್ಭುತ ಸೌಂದರ್ಯದ ಮುಂದೆ ಮೊದಲಬಾರಿ ನಿಂತಾಗ ಭಾವಸಮಾಧಿಗೆ ಹೋಗಲೊಲ್ಲದೆ 'ಎಷ್ಟೊಂದು ಶಕ್ತಿ ಪೋಲಾಗುತ್ತಿದೆ!' ಎಂದರಂತೆ (ಈ ಮಾತನ್ನು ಇತರರ ವಿಷಯದಲ್ಲಿ ಹೇಳಿದ್ದನ್ನೂ ಕೇಳಿದ್ದೇನೆ). ಈ ಕಥೆ ನಿಜವಲ್ಲದಿದ್ದರೆ ನಿಜವಾಗಬೇಕಾದದ್ದು. ವಿಶ್ವೇಶ್ವರಯ್ಯನವರಿಂದ ಹೊರಡಬೇಕಾದುದು ಅಂಥ ಮಾತೇ. ಆ ಜಲಪಾತದ ಶಕ್ತಿಯನ್ನು ಉಪಯೋಗಕ್ಕೆ ತರಲು ಮೈಸೂರು ಸರ್ಕಾರ ಈಗ ಶ್ರಮಿಸುತ್ತಿದೆ.

ಬಡವರು ತಮಗೆ ಅವಶ್ಯಕವಾದ ಸೇವೆಯೆಲ್ಲಕ್ಕೂ ಹಣ ಸುರಿಯಬೇಕು. ಹಣಗಾರರೂ ಅಧಿಕಾರದಲ್ಲಿರುವವರೂ ಅನೇಕ ವೇಳೆ ಬಿಟ್ಟಿ ಸೇವೆಯನ್ನು ನಿರೀಕ್ಷಿಸುತ್ತಾರೆ. ಪಡೆದೂ ಪಡೆಯುತ್ತಾರೆ. 'ಅದು ಪ್ರಭಾವಶಾಲಿಗಳಾದವರಿಗೆ ನಾವು ಸಲ್ಲಿಸಬೇಕಾದ ಕಾಣಿಕೆ, ಅವರಿಂದ ಹಣ ತೆಗೆದುಕೊಳ್ಳದಿರುವುದು ವಿವೇಕ' ಎಂಬ ಭಾವನೆ ಜನರ ಮನಸ್ಸಿನಲ್ಲಿರುವುದು ಸಾಮಾನ್ಯ. ಆದರೆ ವಿಶ್ವೇಶ್ವರಯ್ಯನವರು 'ದುಡಿದವನಿಗೆ ಪ್ರತಿಫಲ ದೊರೆಯಲೇಬೇಕು' ಎಂಬ ತತ್ವಕ್ಕೆ ವಿರೋಧವಾಗಿ ಎಂದೂ ನಡೆದವರಲ್ಲ. ಒಂದು ಬಾರಿ ಅವರು ಹಾಸನ ಜಿಲ್ಲೆಯ ಯಾವುದೋ ಸಣ್ಣ ಊರಿನ ಬಳಿ ಬಿಡಾರ ಮಾಡಿದ್ದರಂತೆ. ಕೈ ಬೆರಳಿಗೆ ಅಕಸ್ಮಾತ್ತಾಗಿ ಸಣ್ಣ ಗಾಯವಾಗಿ ರಕ್ತ ಬಂತು. ಹಳ್ಳಿ ಆಸ್ಪತ್ರೆಗೆ ಹೋಗಿ ಗಾಯದ ಮೇಲೊಂದು ಪ್ಲಾಸ್ತ್ರಿ ಹಾಕಿಸಿ, ಮರಳಿ ಬಿಡಾರಕ್ಕೆ ಬಂದೊಡನೆ ಡಾಕ್ಟರಿಗೆ ಇಪ್ಪತ್ತೈದು ರೂಪಾಯಿನ ಚೆಕ್ಕು ಕಳಿಸಿದರು. ಡಾಕ್ಟರರು ಚೆಕ್ಕನ್ನು ಹಿಡಿದುಕೊಂಡು ಓಡಿಬಂದು, 'ನನ್ನ ಕರ್ತವ್ಯಕ್ಕಿಂತ ಹೆಚ್ಚಿದನೇನನ್ನೂ ನಾನು ಮಾಡಲಿಲ್ಲ. ಈ ಚೆಕ್ಕನ್ನು ತೆಗೆದುಕೊಳ್ಳಲಾರೆ. ತಮಗೆ ಸೇವೆ ಸಲ್ಲಿಸಲು ಅವಕಾಶ ಸಿಕ್ಕಿದ್ದೇ ನನಗೊಂದು ಗೌರವ' ಎಂದರು. ಅದಕ್ಕೆ ಉತ್ತರವಾಗಿ ಆತನ ಕೊನೆಯ ವಾಕ್ಯಕ್ಕೆ ಹೆಚ್ಚಿನ

ವ್ಯಾಪ್ತಿಯನ್ನು ಕೊಟ್ಟು, ಗಂಭೀರಮುದ್ರೆಯಿಂದ ಹೇಳಿದರು: 'ಹೌದು, ಯಾವ ರೋಗಿಗೇ ಆಗಲಿ, ಸೇವೆ ಸಲ್ಲಿಸಿದಾಗ ನಿಮ್ಮನ್ನು ನೀವು ಗೌರವಿಸಿಕೊಂಡಂತೆ. ನಮೆಲ್ಲರ ಮನೋವೃತ್ತಿಯೂ ಆಗಿರಬೇಕೆಂದೇ ನನ್ನ ಆಸೆ. ಆದರೆ ಹಣ ಕೊಡುವ ಶಕ್ತಿಯುಳ್ಳವನು ಕೊಡಬೇಕು. ಕೊಡದಿದ್ದರೆ, ಕೊಡಲಾರದವರಿಂದ ಹಣ ಪಡೆಯುವ ಆಸೆ ನಿಮ್ಮಲ್ಲಿ ಕುದುರಬಹುದು. ನಿಮ್ಮ ಕರ್ತವ್ಯವನ್ನು ನೀವು ಪಾಲಿಸಿದ್ದೀರಿ; ನನ್ನದನ್ನೂ ಪಾಲಿಸಲು ಅವಕಾಶ ಕೊಡಿ.'

ಕೆಲವು ವೇಳೆ ಮಹಾಪುರುಷರು ಉನ್ನತವಾಗಿ ಬೆಳೆದು ವಿಶಾಲವಾಗಿ ಕೊಂಬೆಗಳನ್ನು ಹರಡಿಕೊಂಡಿರುವ ಮರಗಳಂತೆ ತಮ್ಮ ಸುತ್ತಲೂ ದಟ್ಟವಾದ ನೆರಳು ಚೆಲ್ಲುತ್ತಾರೆ; ಆ ನೆರಳಿನಲ್ಲಿ ಮತ್ತಾವ ಗಿಡವೂ ಬೆಳೆಯದು. ಅಂಥವರ ಪ್ರಭಾವದಿಂದಾಗಿ ಅವರ ಸುತ್ತಮುತ್ತ ಇರುವವರ ಆತ್ಮವಿಶ್ವಾಸ, ಎದೆಗಾರಿಕೆ, ಮುನ್ನುಗ್ಗುವ ಶಕ್ತಿ ಇವೆಲ್ಲಾ ಕುಂದುಹೋಗಬಹುದು. ಈ ಬಗೆಯ ಲೋಪಕ್ಕೆ ಅವಕಾಶ ಕೊಡದಿರುವ ಅಪರೂಪ ವ್ಯಕ್ತಿಗಳಲ್ಲಿ ವಿಶ್ವೇಶ್ವರಯ್ಯನವರೂ ಒಬ್ಬರು. ಅವರು ತಮ್ಮ ಸುತ್ತಲೂ ಚೆಲ್ಲಿರುವುದು ನೆರಳಲ್ಲ, ಬೆಳಕು. ಅವರು ಬಯಸುತ್ತಿದ್ದದ್ದೂ ಕುರುಡು ವಿಧೇಯತೆಯಲ್ಲ; ಆತ್ಮವಿಶ್ವಾಸವುಳ್ಳವರನ್ನೂ ಹೊಸ ಪ್ರಯೋಗಗಳನ್ನು ನಡೆಸುವ ಕೆಚ್ಚುಳ್ಳವರನ್ನೂ ಅವರು ಹುಡುಕಿಕೊಂಡು ಹೋಗುತ್ತಿದ್ದರು; ಆ ಗುಣಗಳನ್ನು ಇತರರ ಮೇಲೆ ಬಲಾತ್ಕಾರವಾಗಿ ಹೊರಿಸಿದ್ದೂ ಉಂಟು. ಮೈಸೂರು ರಾಜ್ಯದಲ್ಲಿ ಅವರ ನಂತರ ಅಧಿಕಾರಕ್ಕೆ ಬಂದು ದಕ್ಷತೆಗೂ ಪ್ರಾಮಾಣಿಕತೆಗೂ ಹೆಸರು ಪಡೆದ ದಿವಾನರಿಬ್ಬರು ಅವರೊಡನೆಯೇ ಬಹುಕಾಲ ಕೆಲಸ ಮಾಡಿ ಅವರಲ್ಲಿ ಭಕ್ತಿಯಿಟ್ಟಿದ್ದರು; ಅವರ ಪಾಲಿಸಿಗಳನ್ನು ಮುಂದುವರೆಸಿದವರು. ಆದರೂ ಅವಶ್ಯಕವೆಂದು ತೋರಿದಾಗ ವಿಶ್ವೇಶ್ವರಯ್ಯನವರ

ಅಭಿಪ್ರಾಯಗಳನ್ನು ವಿರೋಧಿಸುವ ಧೈರ್ಯ ಅವರಲ್ಲಿ ಬೆಳೆದಿತ್ತು; ಪ್ರಾಮಾಣಿಕ ವಿರೋಧಕ್ಕೆ ಗೌರವ ಕೊಡುವ ಔನ್ನತ್ಯ ವಿಶ್ವೇಶ್ವರಯ್ಯನವರಲ್ಲಿತ್ತು. ಆತ್ಮವಿಶ್ವಾಸವನ್ನು ಅವರು ಹೇಗೆ ಬೆಳೆಸುತ್ತಿದ್ದರೆಂಬುದಕ್ಕೆ ಉದಾಹರಣೆಯಾಗಿ ಒಂದು ಪ್ರಸಂಗವನ್ನು ಇಲ್ಲಿ ಕಾಣಿಸಬಹುದು. ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ಬ್ಲಾಸ್ಟ್-ಫರ್ನೇಸಿನ ಮೇಲ್ವಿಚಾರಣೆಗೆ ಅಮೇರಿಕಾದವರೊಬ್ಬರನ್ನು ನೇಮಿಸಿದ್ದರು. ಆತನ ಅಧಿಕಾರಾವಧಿ ಮುಗಿದೊಡನೆ ವಿಶ್ವೇಶ್ವರಯ್ಯನವರು ಅವರನ್ನು ಗೌರವದಿಂದ ಕಳಿಸಿಕೊಟ್ಟು, ಮೈಸೂರಿನವರೊಬ್ಬರನ್ನು ಕರೆದು 'ಈ ಕೆಲಸವನ್ನು ನೀವು ವಹಿಸಿಕೊಳ್ಳಿ' ಎಂದರು. ಆ ಯುವಕನಿಗೆ ಅನಿರೀಕ್ಷಿತವಾಗಿ ಈ ಸನ್ಮಾನ ದೊರೆತದ್ದು ಆಶ್ಚರ್ಯವನ್ನುಂಟುಮಾಡಿತು. ಯಾಂತ್ರಿಕ ವಿಷಯಗಳಲ್ಲಿ ದಕ್ಷತೆಯಿರುವುದೆಂದರೆ ಬಿಳಿಯರಲ್ಲಿ ಮಾತ್ರ ಎಂದು ಜನ ನಂಬಿದ್ದ ಕಾಲ! ಆತ 'ನನ್ನ ಕೈಲಾದಷ್ಟು ನಿಷ್ಠೆಯಿಂದ ಕೆಲಸ ಮಾಡುತ್ತೇನೆ. ನನಗೆ ಈ ಕೆಲಸಕ್ಕೆ ಬೇಕಾದಷ್ಟು ಶಕ್ತಿಯಿದೆಯೋ ಇಲ್ಲವೋ ಕಾಣೆ' ಎಂದು ನಮ್ರನಾಗಿ ತಡವರಿಸಿದ. ವಿಶ್ವೇಶ್ವರಯ್ಯನವರ ಉತ್ತರ ಸ್ವಲ್ಪ ನಿಷ್ಠುರವಾಗಿಯೇ ಬಂತು: 'ನಿಮಗೆ ಶಕ್ತಿಯಿದೆಯೆ ಅಂತ ನಾನು ಕೇಳುತ್ತಿಲ್ಲ, ಇದೆ ಅಂತ ಹೇಳುತ್ತಿದ್ದೇನೆ'.

'ವಿಶ್ವೇಶ್ವರಯ್ಯನವರಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಸ್ವಲ್ಪ ಹೆಚ್ಚಾಯಿತಲ್ಲವೇ?' ಎಂಬ ಸಂದೇಹವನ್ನು ಕೆಲವರು ವ್ಯಕ್ತಪಡಿಸಿದ್ದಾರೆ. ನಮ್ಮ ಜೀವಸಂಪತ್ತನ್ನು ಹೆಚ್ಚಿಸಲು ನೆರವಾಗುವ ಅಂಶಗಳು ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಕಂಡುಬಂದಾಗ ಅವನ್ನು ಸ್ವೀಕರಿಸಲು ವಿಶ್ವೇಶ್ವರಯ್ಯನವರು ಹಿಂದೆಗೆಯುತ್ತಿರಲಿಲ್ಲ. ಏಕೆ ಹಿಂದೆಗೆಯಬೇಕು? ಆದರೆ ಅವರ ಜೀವನಕ್ಕೆ ತಳಹದಿಯಾಗಿದ್ದದ್ದು ಭಾರತದ ಸಂಸ್ಕೃತಿಯಲ್ಲವೆಂದು ಭಾವಿಸಿದರೆ ಅದು ತಪ್ಪು. ಅವರಿಗೆ ಪಾಶ್ಚಾತ್ಯರ ದಿರಸನ್ನು ಕಂಡರೆ ಅಭಿಮಾನವೇನೋ ಉಂಟು. ಅದು ನೀಟಾಗಿರುತ್ತದೆ, ಅತ್ತ ಇತ್ತ ಹಾರಾಡುವುದಿಲ್ಲ, ಕೈಕಾಲುಗಳ ಚಲನೆಗೆ ಅಡ್ಡಿಯಾಗುವುದಿಲ್ಲ. ಆದರೆ ಮನೆಯಲ್ಲಿ ಊಟಕ್ಕೆ ಕುಳಿತುಕೊಳ್ಳುವಾಗ ಅವರು ಪಂಚೆಯನ್ನೇ ಉಡುತ್ತಿದ್ದರಂತೆ. ಕೈಗಾರಿಕೆಗಳನ್ನು ಬೆಳೆಸಿಕೊಳ್ಳದಿದ್ದರೆ ಭಾರತಕ್ಕೆ ಉಳಿಗಾಲವಿಲ್ಲವೆಂಬುದನ್ನು ಅವರಿಗಿಂತ ಚೆನ್ನಾಗಿ ಮನಗಂಡವರಿಲ್ಲ; ಆದರೆ ಅವರು ಪ್ರಯಾಣ ಹೊರಟಿದ್ದಾಗ ಅವರ ಸೂಟ್ ಕೇಸಿನಲ್ಲಿ ಭಗವದ್ಗೀತೆಯ ಪ್ರತಿ ಇದ್ದದ್ದನ್ನು ಮಿತ್ರರೊಬ್ಬರು ಕಂಡಿದ್ದಾರೆ. ಕೊನೆಯವರೆಗೂ ಅವರ ಮನೆಯಲ್ಲಿ ಉಪಾಕರ್ಮ ಮೊದಲಾದ ಹಬ್ಬಗಳು ಒಂದು ಮಿತಿಯಲ್ಲಿ –ಅವರಿಗಿದ್ದ ಕಾಲಾವಕಾಶದ ಮಿತಿಯಲ್ಲಿ –ಆಚರಣೆಯಲ್ಲಿದ್ದವೆಂದು ಕೇಳಿದ್ದೇನೆ. ಅವರು ಇಹಜೀವನಕ್ಕೆ ತಿರಸ್ಕಾರ ಹಾಕಿ ಆಧ್ಯಾತ್ಮಿಕ ಜೀವನವೊಂದನ್ನೇ ಗಗನಕ್ಕೆ ಏರಿಸುತ್ತಿರಲಿಲ್ಲ ನಿಜ. ಆದರೆ, ನಮ್ಮ ಉಪನಿಷತ್ತುಗಳು ತಾನೆ ಹಾಗೆ ಮಾಡುತ್ತವೇನು? ಕಾಯಕದ ಹಿರಿಮೆ, ಕರ್ತವ್ಯನಿಷ್ಠೆ ಸರ್ವರಿಗೂ ಸಂಪದ್ಯುಕ್ತವಾದ ಪೂರ್ಣಜೀವನ – ಇಂಥ ಆದರ್ಶಗಳನ್ನು ನಂಬಿದ್ದ ವಿಶ್ವೇಶ್ವರಯ್ಯನವರು ಉಪನಿಷತ್ತುಗಳ ಶ್ರುತಿಗೆ ಹೊಂದುವಂಥ ಜೀವನವನ್ನು ನಡೆಸುತ್ತಿದ್ದರೆಂದು ಧಾರಾಳವಾಗಿ ಹೇಳಬಹುದು. ಅಸ್ಪಷ್ಟವಾದ ಜೀವನ ಸಂಬಂಧವನ್ನು ಕಡಿದುಕೊಂಡಿರುವ, ನಿಶ್ಚಲ ಅನುಭಾವವು 'ನಾನೇ ಭಾರತದ ಅಂತರಾತ್ಮ' ಎಂದು ಅನೇಕವೇಳೆ ಸೋಗುಹಾಕುತ್ತದೆ. ಈ ಬಗೆಯ ಅನುಭಾವ ವಿಶ್ವೇಶ್ವರಯ್ಯನವರಿಗೆ ಹಿಡಿಸದು.

'ವಿಶ್ವೇಶ್ವರಯ್ಯ: ವ್ಯಕ್ತಿ ಮತ್ತು ಐತಿಹ್ಯ' ಈ ದ್ವೈತ ಸಲ್ಲದು; ಅವರ ಮಟ್ಟಿಗೆ 'ವ್ಯಕ್ತಿಯೇ ಐತಿಹ್ಯ, ಐತಿಹ್ಯವೇ ವ್ಯಕ್ತಿ' ಎನ್ನಬಹುದು.

## ಲೇಖಕರ ಪರಿಚಯ

ಅಕ್ಕಿಹೆಬ್ಬಾಳು ನರಸಿಂಹ ಮೂರ್ತಿರಾವ್ (1900) ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಪ್ರೊಫೆಸರ್ ಆಗಿದ್ದವರು. ಕನ್ನಡದ ಲಲಿತ ಪ್ರಬಂಧಗಳಲ್ಲಿ ಅವರಷ್ಟು ಎತ್ತರದ ಸಾಧನೆ ಮಾಡಿದವರಿಲ್ಲ. ಬಹಳ ಸುಂದರವಾದ ಸರಸಪೂರ್ಣವಾದ ಗದ್ಯವನ್ನು ಬರೆದ ಮೂರ್ತಿರಾಯರು, 'ಹಗಲುಗನಸುಗಳು', 'ಅಲೆಯುವ ಮನ', 'ಮಿನುಗುಮಿಂಚು' ಮುಂತಾದ ಪ್ರಬಂಧ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವರ 'ಪತ್ರಗಳು ಚಿತ್ರಗಳು' ಕೃತಿಗೆ 1979 ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ ಬಂದಿದೆ. ಕನ್ನಡದಲ್ಲಿ ಶಿವರಾಮ ಕಾರಂತರಂತೆ ಮೂರ್ತಿರಾಯರು ಕೂಡ ನಾಸ್ತಿಕವಾದಿ ಚಿಂತನೆಯ ಪ್ರತಿಪಾದಕರು. ಅವರು ಬರೆದ 'ದೇವರು' ಪುಸ್ತಕವು ಬಹಳ ಚರ್ಚೆಗೆ ಒಳಗಾಗಿದೆ. ಅವರ ಪ್ರವಾಸ ಕಥನದ ಹೆಸರು 'ಅಪರವಯಸ್ಕನ ಅಮೆರಿಕಾ ಯಾತ್ರೆ'. ಕನ್ನಡದಲ್ಲಿ ನೂರು ವರ್ಷಕ್ಕೂ ಮೀರಿದ ಸುದೀರ್ಘ ಬಾಳುವೆ ಮಾಡಿದ ಲೇಖಕರಲ್ಲಿ ಒಬ್ಬರಾಗಿರುವ ಮೂರ್ತಿರಾಯರು 'ಸಂ ಗಣ್ಣಿನ ಹಿನ್ನೋಟ' ಎಂಬ ಆತ್ಮಚರಿತ್ರೆಯನ್ನು ಬರೆದಿದ್ದಾರೆ. ಮೂರ್ತಿರಾಯರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. 1984 ರಲ್ಲಿ ಕೈವಾರದಲ್ಲಿ ನಡೆದ 56ನೇ ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಈ ವ್ಯಕ್ತಿ ಚಿತ್ರವನ್ನು ಅವರ 'ಸಮಗ್ರ ಲಲಿತ ಪ್ರಬಂಧಗಳು' ಎಂಬ ಸಂಕಲನದಿಂದ ಆರಿಸಿಕೊಳ್ಳಲಾಗಿದೆ. ಇಲ್ಲಿ ಲೇಖಕರು ಸರ್ ಎಂ ವಿಶ್ವೇಶ್ವರಯ್ಯನವರ ಬಗ್ಗೆ ಜನರಲ್ಲಿರುವ ನೆನಪಿನ ಪ್ರಸಂಗಗಳನ್ನು ಇಟ್ಟುಕೊಂಡು, ಕರ್ನಾಟಕಕ್ಕೆ ಅವರು ಮಾಡಿದ ಸೇವೆಯನ್ನು ಚಿತ್ರಿಸಿದ್ದಾರೆ. ಅವರ ಬಗ್ಗೆ ಇರುವ ಕೆಲವು ಟೀಕೆಗಳಿಗೆ ಉತ್ತರಿಸಲು ಯತ್ನಿಸಿದ್ದಾರೆ.

## ಲೇಖನದ ಆಶಯ

ಸರ್ ಎಂ ವಿಶ್ವೇಶ್ವರಯ್ಯನವರು ವಿಭಿನ್ನ ರೀತಿಯ ವೈಜ್ಞಾನಿಕ ಮತ್ತು ಆಧುನಿಕ ಸಮಾಜವನ್ನು ಕಟ್ಟಬೇಕು ಎಂಬ ನಿಲುವನ್ನು ಹೊಂದಿ**ದ್ದ**ರು. ಸಮಾಜದಲ್ಲಿ ಸರ್ವ ಜನಾಂಗವು, ರಾಜ್ಯದ ಎಲ್ಲಾ ಸವಲತ್ತುಗಳನ್ನು ಪಡೆಯಬಹುದು ಎನ್ನುವಂತಹ ಭಾವನೆಯನ್ನು ಆಧುನಿಕ ನವಕರ್ನಾಟಕದ ಹಾಗೂ ನವ ಮೈಸೂರು ರಾಜ್ಯದಲ್ಲಿ ಪ್ರತಿಯೊಬ್ಬರು ಹೊಂದಿರಬೇಕು ಎಂಬಂತಹ ಕಲ್ಪನೆಯನ್ನು ಸರ್ ಎಂ ವಿ ಯವರು ಸ್ವತಂತ್ರ ಪೂರ್ವದಲ್ಲಿ ಹೊಂದಿದ್ದರು ಎಂಬ ಅಂಶವನ್ನು ಈ ಲೇಖನವು ಪ್ರಸ್ತುತಪಡಿಸುತ್ತದೆ. ಈ ಲೇಖನದಲ್ಲಿ ವಿಶ್ವೇಶ್ವರಯ್ಯನವರು ಕೈಗಾರೀಕರಣ ಆಗದೆ ಇದ್ದರೆ ಭವಿಷ್ಯದ ಭಾರತಕ್ಕೆ ಮತ್ತು ನಮ್ಮ ನಾಡು ಕರ್ನಾಟಕಕ್ಕೆ ಉಜ್ವಲ ಭವಿಷ್ಯವಿಲ್ಲ ಎಂಬ ಮಾತನ್ನು ಹೇಗೆ ಹೇಳಿದ್ದಾರೆ ಮತ್ತು ತಮ್ಮ ಕಾರ್ಯಗಳಿಂದ ಮಾಡಿ ತೋರಿಸಿದ್ದಾರೆ ಎಂಬಂತಹ ಅಂಶಗಳನ್ನು ಪ್ರಸ್ತುತಪಡಿಸುತ್ತದೆ. ವಿಶ್ವೇಶ್ವರಯ್ಯನವರ ಪ್ರಾಮಾಣಿಕತೆ ಮತ್ತು ದೂರದೃಷ್ಟಿಯುಳ್ಳ ಮನೋಭಾವ ಯಾವುದನ್ನೇ ಗಮನಿಸಿದರೂ ಅದರಲ್ಲಿ ಸಮಾಜಕ್ಕೆ ನೀಡಬಹುದಾದ ಧನಾತ್ಮಕ ಅಂಶಗಳನ್ನು ಗುರುತಿಸುವುದು ಅಂತಹ ವಿಷಯಗಳನ್ನು ಈ ಲೇಖನದಲ್ಲಿ ಕಾಣಬಹುದು. ದಿವಾನ ಪದವಿಗೆ ರಾಜೀನಾಮೆ ನೀಡುವ ಪ್ರಸಂಗ - ಹಿಂದುಳಿದ ವರ್ಗಗಳಿಗೆ ಸರಕಾರಿ ಕೆಲಸಗಳಲ್ಲಿ ಮೀಸಲಾತಿ ನೀಡುವ ಕುರಿತು ಮೈಸೂರಿನ ದೊರೆಗಳಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಮಿಲ್ಲರ್ ಆಯೋಗ ನೇಮಿಸಿ ಪಡೆದ ವರದಿಯನ್ನು ಜಾರಿಗೆ ತರಬೇಕೆಂದು ಬಯಸಿದರು ಇದಕ್ಕೆ ಸರ್ ಎಂ ವಿ ರವರ ಬಲವಾದ ವಿರೋಧವಿತ್ತು ಹೀಗೆ ಮಾಡುವುದರಿಂದ ಪ್ರತಿಭೆಗೆ ಅನ್ಯಾಯವನ್ನು ಮಾಡಿದಂತಾಗುತ್ತದೆ ಎಂದು ಅವರು ಭಾವಿಸಿದ್ದರು ಆದರೆ ಒಡೆಯರು ವರದಿಯನ್ನು ಜಾರಿಗೆ ತರಲು ನಿರ್ಧರಿಸಿದಾಗ ವಿಶ್ವೇಶ್ವರಯ್ಯನವರು ತಾತ್ವಿಕ ಕಾರಣವನ್ನು ನೀಡಿ ರಾಜೀನಾಮೆಯನ್ನು ನೀಡಿದರು.

## ಮಾದರಿ ಪ್ರಶ್ನೆಗಳು

1. ವಿಶ್ವೇಶ್ವರಯ್ಯನವರು ಮಂಡ್ಯ ಜಿಲ್ಲೆಯ ಜನರಿಗೆ ಅನ್ನ ಬ್ರಹ್ಮನಾಗಿ ಅವತಾರ ಪುರುಷನಾಗಿ ಕಾಣಿಸಿಕೊಂಡರು. ಈ ಮಾತನ್ನು ವಿವರಿಸಿ.
2. ವಿಶ್ವೇಶ್ವರಯ್ಯನವರಲ್ಲಿದ್ದ ಶಿಸ್ತು, ಸಮಯ ಪ್ರಜ್ಞೆ, ತರ್ಕಬದ್ಧವಾದ ಆಲೋಚನೆ ಈ ವಿಷಯಗಳಿಗೆ ಲೇಖನದಲ್ಲಿ ಬರುವ ನಿದರ್ಶನಗಳನ್ನು ವಿವರಿಸಿ.
3. "ಪೂರ್ವಸಿದ್ಧತೆ ಇಲ್ಲದ ಭಾಷಣ ಅನರ್ಥವನ್ನು ಉಂಟುಮಾಡುತ್ತದೆ". ಈ ಮಾತನ್ನು ಲೇಖಕರು ಯಾವ ನಿದರ್ಶನಗಳ ಮುಖಾಂತರ ವಿಶ್ವೇಶ್ವರಯ್ಯನವರ ಪೂರ್ವಸಿದ್ಧತೆಯ ವ್ಯಕ್ತಿತ್ವವನ್ನು ಪ್ರಸ್ತುತಪಡಿಸಿದ್ದಾರೆ?
4. "ದುಡಿದವನಿಗೆ ಪ್ರತಿಫಲ ದೊರೆಯಬೇಕು" ಎಂಬ ವಿಶ್ವೇಶ್ವರಯ್ಯನವರ ಈ ಮಾತನ್ನು ಅವರ ಬದುಕಿನಲ್ಲಿ ನಡೆದ ಘಟನೆಯ ಮೂಲಕ ವಿವರಿಸಿ.
5. ವಿಶ್ವೇಶ್ವರಯ್ಯನವರ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಕುರಿತಂತೆ ಲೇಖಕರಾದ ಎ ಎನ್ ಮೂರ್ತಿರಾಯರ ಅಭಿಪ್ರಾಯವೇನು? ಚರ್ಚಿಸಿರಿ.
6. ವಿಶ್ವೇಶ್ವರಯ್ಯನವರು ತಮ್ಮ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಇತರೆ ಸಿಬ್ಬಂದಿ ವರ್ಗದವರಲ್ಲಿ ಆತ್ಮವಿಶ್ವಾಸವನ್ನು ತುಂಬುತ್ತಿದ್ದ ಬಗೆಯನ್ನು ವಿವರಿಸಿರಿ.
7. ಕರ್ನಾಟಕದ (ನವ ಮೈಸೂರು ರಾಜ್ಯದ) ಅಭಿವೃದ್ಧಿಗೆ ವಿಶ್ವೇಶ್ವರಯ್ಯನವರು ಮಾಡಿದ ಮುಖ್ಯ ಕೆಲಸ ಕಾರ್ಯಗಳು ಯಾವುವು?
8. ದಿವಾನ ಪದವಿ ಬಂದಾಗ ವಿಶ್ವೇಶ್ವರಯ್ಯನವರು ತಮ್ಮ ತಾಯಿ ಮತ್ತು ಸೋದರ ಮಾವನಿಗೆ ತಿಳಿಸಿದ ಮಾತು ಏನು?
9. ವಿಶ್ವೇಶ್ವರಯ್ಯನವರಿಗೆ ಪ್ರಕೃತಿ ಸೌಂದರ್ಯವನ್ನು ಸವಿಯುವುದರ ಜೊತೆಗೆ ಒಂದು ಸಮಾಜದ ಉದ್ಧಾರಕ್ಕೆ ಬೇಕಾಗುವ ಅಂಶವನ್ನು ಯಾವ ರೀತಿ ಹುಡುಕಿ ಕೊಳ್ಳುತ್ತಿದ್ದರು ಮತ್ತು ಬಳಸಿಕೊಳ್ಳುತ್ತಿದ್ದರು ಎಂಬ ಅಂಶಗಳನ್ನು ನಿದರ್ಶನಗಳ ಸಮೇತ ವಿವರಿಸಿ.
10. ವಿಶ್ವೇಶ್ವರಯ್ಯನವರ ಕುರಿತು ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದ ಸಹ ಪ್ರಯಾಣಿಕನೊಬ್ಬ ಮಾಡಿದ ಉದ್ಗಾರವು ಲೇಖಕರಿಗೆ ಯಾಕೆ ನಿಜವೆನಿಸಿತು? ವಿವರಿಸಿ?

ಪೂರಕ ಓದು: ಕರಕುಶಲ ಕಲೆಗಳು ಮತ್ತು ಪರಂಪರೆಯ ವಿಜ್ಞಾನ - ಕರೀಗೌಡ ಬೀಚನಹಳ್ಳಿ

ಕರಕುಶಲ ಕಲೆಗಳಿಗೆ ಒಂದು ದೀರ್ಘವಾದ ಸಾಂಪ್ರದಾಯಕ ಪರಂಪರೆ ಹಾಗೂ ಇತಿಹಾಸವಿದೆ. ಮನುಕುಲದ ಚರಿತ್ರೆಯಲ್ಲಿ ಮಹಿಳೆಯರ ಕೈಕಸುಬಾಗಿ ಆರಂಭವಾದ ಈ ಕಲೆ ಒಂದು ವಿಶೇಷವಾದ ವಿಸ್ಮಯಕರ ಆವಿಷ್ಕಾರವಾಗಿ ಬೆಳೆದು ಬಂದಿದೆ. ನಾಗರಿಕತೆ ಬೆಳೆದಂತೆಲ್ಲಾ ಕರಕುಶಲ ಕಲೆಗಳಲ್ಲಿಯೂ ಹೊಸಹೊಸ ಆವಿಷ್ಕಾರಗಳು ನಡೆದಿವೆ. ಆದಿಯಲ್ಲಿ ಕರಕುಶಲ ಕಲೆಗಳು ಗೃಹೋಪಯೋಗಿ ಉದ್ಯಮವಾಗಿದ್ದರ ಜೊತೆಗೆ ಪರಿಸರಬದ್ಧವಾಗಿದ್ದವು. ಕರಕುಶಲ ಕಲೆಗಳ ಸ್ಥಾನ ಚಾರಿತ್ರಿಕವಾಗಿ, ಪ್ರಾಕೃತಿಕವಾಗಿ ಮತ್ತು ಸಾಂಪ್ರದಾಯಕವಾಗಿ ಬಹುಮುಖ್ಯವಾಗಿತ್ತು. ಆಯಾಯಾ ಪರಿಸರದಲ್ಲಿ ಸಿಗುತ್ತಿದ್ದ ಕಚ್ಚಾಸಾಮಗ್ರಿಗಳೇ ಆಯಾಯ ಕರಕುಶಲ ಕಲೆಗಳಿಗೆ ವಸ್ತುವಾಗುತ್ತಿದ್ದವು. ಅವುಗಳ ಮುಖಾಂತರ ಕುಶಲಕರ್ಮಿಯ ಕೈಕೌಶಲ್ಯ, ನೈಪುಣ್ಯ, ಸೌಂದರ್ಯಪ್ರಜ್ಞೆ ಪ್ರತಿಫಲಿತವಾಗುತ್ತಿತ್ತು. ಪ್ರಪಂಚದಾದ್ಯಂತ ವಿವಿಧ ಬಗೆಯಲ್ಲಿ ಮನುಷ್ಯನ ಪ್ರಜ್ಞೆ ವಿಕಾಸವಾದಂತೆಲ್ಲಾ ಕರಕುಶಲ ಕಲೆಗಳಲ್ಲಿಯೂ ಬಗೆಬಗೆಯ ಆವಿಷ್ಕಾರಗಳು ನಡೆದವು. ಪರಿಸರ ಹಾಗೂ ಕಾಲದ ನಿರಂತರತೆಯಲ್ಲಿ ಕರಕುಶಲ ಕಲೆಗಳು ಬೆಳವಣಿಗೆಯನ್ನೂ, ವೈವಿಧ್ಯತೆಯನ್ನೂ, ಆಕರ್ಷಣೆಯನ್ನೂ ಪಡೆದುಕೊಂಡವು. ಮಡಕೆ ತಯಾರಿಕೆಯಲ್ಲಿ, ಬುಟ್ಟಿ ಹೆಣಿಗೆಯಲ್ಲಿ, ಮನೆಕಟ್ಟುವಲ್ಲಿ, ಬಣ್ಣಬಣ್ಣದ ಚಿತ್ತಾರದ ಬಟ್ಟೆಗಳನ್ನು ನೇಯುವಲ್ಲಿ, ಚರ್ಮದಿಂದ ವಿವಿಧ ಬಗೆಯ ವಸ್ತುಗಳನ್ನು ಸಿದ್ಧಪಡಿಸುವಲ್ಲಿ, ವಿಧವಿಧ ವಸ್ತುವಡವೆಗಳನ್ನು ಮಾಡುವಲ್ಲಿ – ಹೀಗೆ ಎಲ್ಲಾ ಕರಕುಶಲಕಲೆಗಳಲ್ಲಿ ಸಾಕಷ್ಟು ಸ್ಥಳೀಯ ಸಾಂಪ್ರದಾಯಕ ತಿಳಿವಳಿಕೆ ಮತ್ತು ಆಧುನಿಕ ತಂತ್ರಜ್ಞಾನದ ಪ್ರಭಾವ ಒಟ್ಟೊಟ್ಟಿಗೇ ಬೆಳೆಯಿತು. ಈ ಕಲೆ ಒಂದು ಸಾಂಪ್ರದಾಯಕ, ಹವ್ಯಾಸ, ವೃತ್ತಿ ಎಂದು ಹೇಳುವವರೆಗೆ ವಿಕಾಸಹೊಂದಿತು.

ಕ್ರಿ.ಪೂ. ೨೫೦೦ ವರ್ಷಗಳಿಂದಲೂ ಭಾರತೀಯ ಕರಕುಶಲ ಕಲೆಗಳಿಗೆ ಅಪಾರ ಬೇಡಿಕೆ ಇದೆ. ಭಾರತೀಯ ನೇಕಾರರು ಪ್ರಕೃತಿದತ್ತವಾದ ಬಣ್ಣಗಳ ಬಗೆಗಿನ ತಿಳಿವಳಿಕೆಯನ್ನು ಮಾತ್ರ ಹೊಂದಿರದೆ ಹಲವು ಸೂಕ್ಷ್ಮ ಬಣ್ಣಗಳನ್ನು ಬಳಸಿ ಬಟ್ಟೆಗೆ ಬಣ್ಣ ಕಟ್ಟುವ ಕಲೆಯಲ್ಲಿ ನಿಪುಣರಾಗಿದ್ದರು. ಭಾರತವು ಬಟ್ಟೆಯ ಮೇಲಿನ ಮುದ್ರಣ ಕಲೆಗೆ ಮೂಲ ನೆಲೆ.

ಕ್ರಿಸ್ತಪೂರ್ವದಿಂದಲೂ ಭಾರತೀಯ ನೇಕಾರರು ಪ್ರಕೃತಿದತ್ತ ಬಣ್ಣಗಳನ್ನು ಬಳಸಿ ಬಟ್ಟೆಗಳಿಗೆ ಬಣ್ಣಕಟ್ಟುವ ಕಲೆಯಲ್ಲಿ ನಿಷ್ಣಾತರಾಗಿದ್ದಾರೆ. ಭಾರತದಲ್ಲಿ ಬಣ್ಣವು ಅತಿಮಹತ್ವದ ಸ್ಥಾನವನ್ನು ಪಡೆದಿದೆ. ಬಣ್ಣಗಾರಿಕೆ ಎಂಬ ಹೆಸರೇ ಬಣ್ಣವನ್ನು ನಿಸರ್ಗದತ್ತವಾದ ಗಿಡಮೂಲಿಕೆ, ಖನಿಜಾಂಶಗಳು ಹಾಗೂ ಕ್ರಿಮಿಕೀಟಗಳಿಂದ ಪಡೆದು ಬಣ್ಣ ಕಟ್ಟುವ ಕ್ರಿಯೆಯನ್ನು ಸೂಚಿಸುತ್ತದೆ. ಬಣ್ಣದ ಮೂಲದ ತಿರುಳನ್ನು ಆದಿಮಾನವನ ಹಂತದಲ್ಲೇ ಗುರುತಿಸಬಹುದು. ಭಾರತದಲ್ಲಿ ಬೇರೆ ಬೇರೆ ಬಣ್ಣಗಳನ್ನು ನೀಡುವ ಸುಮಾರು ೩೦೦ ಗಿಡಗಳಿವೆ ಎಂದು ಅಂದಾಜು ಮಾಡಲಾಗಿದೆ. ಅವು ತಮ್ಮ ಬೇರು, ಕಾಂಡ, ಚಿಗುರು, ಎಲೆ, ಹೂವು, ಕಾಯಿ, ಹಣ್ಣುಗಳಲ್ಲಿ ಬಗೆಬಗೆಯ ಬಣ್ಣಗಳನ್ನು ಹೊಂದಿವೆ. ಬಟ್ಟೆಗಳಿಗೆ ಕುಂಕುಮ, ಅರಿಶಿನ, ನೀಲಿ ಬಣ್ಣಗಳನ್ನು ಕಟ್ಟಲು ಬೇಕಾದ ಮೂಲ ಸಾಮಗ್ರಿಗಳನ್ನು ಪ್ರಕೃತಿಯ ವಿವಿಧ ಕ್ರಿಮಿಕೀಟಗಳಿಂದ ಪಡೆಯಲಾಗುತ್ತಿತ್ತು. ಕಬ್ಬಿಣದ ಲವಣವನ್ನು ನೇರಳೆ, ನೀಲಿ, ಹಸಿರು ಬಣ್ಣಗಳನ್ನು ಪಡೆಯಲು ಮಧ್ಯವರ್ತಿ ವಸ್ತುವನ್ನಾಗಿ ಬಳಸಲಾಗುತ್ತಿತ್ತು.

ಭಾರತದ ಕೆಲವು ಪ್ರದೇಶಗಳಲ್ಲಿ ಬಣ್ಣ ಕಟ್ಟುವ ಕಲೆ ಇಂದಿಗೂ ರೂಢಿಯಲ್ಲಿದೆ. ಪರಂಪರಾಗತವಾದ ಬಣ್ಣ ಕಟ್ಟುವ ಕಲೆ ಹಾಗೂ ಬಣ್ಣಗಾರಿಕೆಯಲ್ಲಿ ಕೆಲವು ಜನಾಂಗಗಳು ನಿಷ್ಣಾತರಾಗಿದ್ದಾರೆ. ಪ್ರಕೃತಿಯಲ್ಲಿ ದೊರೆಯುವ ತಂತ್ರಜ್ಞಾನದ ಬಗ್ಗೆ ತಿಳಿವಳಿಕೆ ಇಂತಹ ಕಲಾವಿದರಲ್ಲಿ ಶತಮಾನಗಳಿಂದ ಶೇಖರಗೊಂಡಿದೆ. ಭಾರತೀಯರ ಪ್ರಕೃತಿದತ್ತ ಬಣ್ಣಗಳ ಬಗೆಗಿನ ತಂತ್ರಜ್ಞಾನ ಪ್ರಪಂಚದ ಬೇರೆ ಬೇರೆ ದೇಶಗಳಲ್ಲೂ ಕಾಣಿಸಿಕೊಳ್ಳತೊಡಗಿದೆ. ಬಟ್ಟೆಗಿರಣಿಗಳ ಯಾಂತ್ರೀಕರಣದಿಂದಾಗಿ ರಾಸಾಯನಿಕ ಬಣ್ಣಗಳ ವ್ಯಾಪಕ ಬಳಕೆ ಹೆಚ್ಚಾಗಿ ಈ ಸ್ಥಳೀಯ ಭಾರತೀಯ ಬಣ್ಣದ ಬಟ್ಟೆಗಳಿಗೆ ಬೇಡಿಕೆ ಕಡಿಮೆಯಾಗುತ್ತಿದೆ. ಬಣ್ಣಗಾರರು ತಮ್ಮ ಗತವೈಭವದ ಈ ಕುಲಕಸುಬನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿದ್ದಾರೆ. ಇಂದು ವಿದ್ಯಾವಂತ ಜನಾಂಗವು ಬಟ್ಟೆಗೆ ಬಣ್ಣಕಟ್ಟುವ ಕುಲಕಸುಬನ್ನು ಮುಂದುವರಿಸಲು ನಿರಾಸಕ್ತವಾಗಿದೆ. ತಮ್ಮ ಹಿರಿಯರು ತಮ್ಮ ಜೀವನವಿಡೀ ಅನುಭವಿಸಿದ ಬಡತನ ಹಾಗೂ ಕುಲಕಸುಬನ್ನು ಉಳಿಸಿಕೊಳ್ಳಲು ನಡೆಸಿದ ಹೋರಾಟದಿಂದಾಗಿ ಈ ವೃತ್ತಿ ಯುವಜನಾಂಗಕ್ಕೆ ಬೇಡವಾಗಿದೆ.

ಭಾರತದಲ್ಲಿ ತಯಾರಾದ ಬಟ್ಟೆಗೆ ಗ್ರೀಸ್, ಏಷಿಯಾ ಮೈನರ್, ಅರೇಬಿಯಾ ಹಾಗೂ ಮೆಡಿಟರೇನಿಯನ್ ದೇಶಗಳಲ್ಲಿ ಅಪಾರ ಬೇಡಿಕೆಯಿತ್ತು. ಈ ದೇಶಗಳಿಗೆ ರಫ್ತಾಗುತ್ತಿದ್ದ ವಿವಿಧ ಬಗೆಯ ಬಟ್ಟೆಗಳ ಬಗ್ಗೆ ಉಲ್ಲೇಖಗಳನ್ನು ಮೆಗಾಸ್ತನೀಸ್, ಸ್ಟ್ರಾಬೋ ಮೊದಲಾದವರು ತಮ್ಮ ಪ್ರವಾಸ ಕಥನಗಳಲ್ಲಿ ಪ್ರಸ್ತಾಪಿಸಿದ್ದಾರೆ. ಭಾರತ ದೇಶವನ್ನು ಆಕ್ರಮಿಸಿದ ಟರ್ಕಿಯರು, ಆಫ್ಘನ್ನರು, ಮೊಗಲರು ಹಾಗೂ ಪೋರ್ಚುಗೀಸ್ ಮುಂತಾದವರು ಭಾರತದ ಕರಕುಶಲ ಕಲೆಗಳಿಗೆ ಆಕರ್ಷಿತರಾಗಿದ್ದರು. ಅವರ ವ್ಯಾಪಾರ ವಹಿವಾಟಿನ ಜೊತೆ ಈ ಕರಕುಶಲ ಕಲೆಗಳ ಸಂಬಂಧ ಪ್ರಧಾನವಾಗಿತ್ತು. ಅವರು ತಮ್ಮ ತಂತ್ರಜ್ಞಾನದ ಬೆಳವಣಿಗೆಗೆ ಅನುಗುಣವಾಗಿ ಕರಕುಶಲ ಕಲೆಗಳಿಗೆ ಪ್ರೋತ್ಸಾಹ ನೀಡಿದರು; ಸಿಂಹಾಸನವೇರಿದ ಪ್ರತಿಯೊಬ್ಬ ದೊರೆಯೂ ನೇಕಾರರಿಗೆ, ಕಸೂತಿಗಾರರಿಗೆ, ಚಿತ್ರಗಾರರಿಗೆ ಹಾಗೂ ಬಣ್ಣಗಾರರಿಗೆ ತಂತಮ್ಮ ನೈಪುಣ್ಯತೆಯನ್ನು, ಕೌಶಲ್ಯವನ್ನು ಹೆಚ್ಚಿಸಿಕೊಳ್ಳಲು ಉತ್ತೇಜನ ನೀಡುತ್ತಿದ್ದರೆಂಬುದು ಇತಿಹಾಸದಿಂದ ತಿಳಿದು ಬರುತ್ತದೆ.

ಕೈಗಾರಿಕಾ ಕ್ರಾಂತಿಯ ಪರಿಣಾಮದಿಂದ, ಹಲವು ಕಾಯಿದೆ ಕಟ್ಟಳೆ ನಿರ್ಬಂಧಗಳಿಂದ ಮತ್ತು ಆಧುನಿಕ ತಂತ್ರಜ್ಞಾನದ ಪ್ರಭಾವದಿಂದ ಸಾಂಪ್ರದಾಯಕ ಕರಕುಶಲ ಕಲೆಗಳ ಮೇಲೆ ಭಾರಿ ಪೆಟ್ಟು ಬಿದ್ದಿತು. ಇದರಿಂದ ಕುಶಲಕರ್ಮಿಗಳ ಸ್ಥಿತಿಗತಿಗಳು ತತ್ತರಿಸಿಹೋದವು. ಹದಿನೆಂಟನೆಯ ಮತ್ತು ಹತ್ತೊಂಬತ್ತನೆಯ ಶತಮಾನಗಳಲ್ಲಿ ನಗರಕೇಂದ್ರಿತ ಕೈಗಾರಿಕೆಗಳ ಯಂತ್ರಗಳಿಂದ ಉತ್ಪಾದಿಸಿದ ವಸ್ತುಗಳು ಹಳ್ಳಿಗಳ ಕಡೆಗೆ ಹರಿಯತೊಡಗಿದಂತೆ ಆ ಕ್ಷಣದಿಂದಲೇ ಹಳ್ಳಿಗಳಲ್ಲಿದ್ದ ಸಾಂಪ್ರದಾಯಕ ಕುಶಲ ಕರ್ಮಿಗಳು ಅದರ ಗಾಢ ಪರಿಣಾಮಗಳನ್ನು ಅನುಭವಿಸಬೇಕಾಯಿತು. ಕುಶಲಕರ್ಮಿಗಳು ತಮ್ಮ ಕೈಗಳಿಂದ ಸಿದ್ಧಪಡಿಸಿ ಮಾರಾಟ ಮಾಡುವ ವಸ್ತುಗಳಿಗಿಂತ ಕೈಗಾರಿಕೆಗಳು ಉತ್ಪಾದಿಸಿದ ವಸ್ತುಗಳ ಬೆಲೆಗಳು ಕಡಿಮೆ ಇದ್ದುದರಿಂದ ಜನರು ಸಹಜವಾಗಿ ಅಗ್ಗದ ಬೆಲೆಯ ವಸ್ತುಗಳನ್ನೇ ಕೊಳ್ಳತೊಡಗಿದರು. ಹೀಗಾಗಿ ಕುಶಲಕರ್ಮಿಗಳು ತಾವು ತಯಾರಿಸಿದ ವಸ್ತುಗಳನ್ನು ತಮ್ಮ ಬೆಲೆಗಳಿಗೆ ಮಾರಲಾಗದೆ ತಮ್ಮ ಕೆಲಸಗಳನ್ನು ನಿಲ್ಲಿಸಿ ಕೈಗಾರಿಕೆಗಳು ಉತ್ಪಾದಿಸುವ ವಸ್ತು-ಸಾಮಗ್ರಿಗಳನ್ನು ರಿಪೇರಿ ಮಾಡಬೇಕಾದ ಸ್ಥಿತಿಗೆ ತಲುಪಿದರು. ಗಡಿಯಾರ ತಯಾರಿಸುತ್ತಿದ್ದ ಕುಶಲಕರ್ಮಿ ತನ್ನ ತಯಾರಿಕೆಯನ್ನು ನಿಲ್ಲಿಸಿ ಕೈಗಾರಿಕೆಗಳು ಉತ್ಪಾದಿಸಿದ ಗಡಿಯಾರವನ್ನು ರಿಪೇರಿ ಮಾಡಿಕೊಡುವುದಕ್ಕೆ ಇಳಿಯಬೇಕಾಯಿತು; ಹಾಗೆಯೇ ಚಮ್ಮಾರ ಸಹ ಅಪರೂಪಕ್ಕೊಮ್ಮೆ ಚಪ್ಪಲಿಗಳನ್ನು ಮಾಡುತ್ತಾ ಕಾರ್ಖಾನೆಗಳು ತಯಾರಿಸಿದ ಹರಿದ ಚಪ್ಪಲಿಗಳನ್ನು ರಿಪೇರಿ ಮಾಡಿಕೊಂಡಿರಬೇಕಾಯಿತು.

ಇದರಿಂದ ಕುಶಲಕರ್ಮಿ ತಯಾರಿಸುವ ವಸ್ತುವಿಗೂ, ಕೈಗಾರಿಕೆಗಳು ಉತ್ಪಾದಿಸುವ ವಸ್ತುವಿಗೂ ಸಮಯದಲ್ಲಿ ಸಾಕಷ್ಟು ಅಂತರ ಉಂಟಾಯಿತು. ತಮ್ಮ ನೆರೆಹೊರೆಯ ಜನರಿಗೆ ಅವಶ್ಯವಿದ್ದ ಸಾಮಗ್ರಿಗಳನ್ನು ಸಿದ್ಧಮಾಡಿಕೊಡುತ್ತಿದ್ದ ಕುಶಲಕರ್ಮಿಗಳ ಕಲೆಯನ್ನು ಇದು ಆಕ್ರಮಿಸಿತು. ಜೊತೆಗೆ ಬರುಬರುತ್ತಾ ಉತ್ಪಾದನೆಯ ಮತ್ತು ಸಾಗಾಣಿಕೆಯ ವೆಚ್ಚ ಸೇರಿ ಕೈಗಾರಿಕೆಗಳು ಉತ್ಪಾದಿಸುವ ಕರಕುಶಲ ಕಲೆಗಳ ಬೆಲೆ ಅಧಿಕವಾಗತೊಡಗಿತು. ಈ ಕಾಲದಲ್ಲಿ ಕೈಗಾರಿಕೆಗಳಿಂದ ಉತ್ಪಾದನೆಗೊಂಡ ವಸ್ತುಗಳಿಗೆ ಘನತೆ, ಪ್ರತಿಷ್ಠೆಗಳು ಬಂದವು. ಗ್ರಾಹಕರು ಪ್ರತಿಷ್ಠಿತ ಸ್ಥಾನ ಪಡೆಯದಿದ್ದ ಕಡಿಮೆ ಬೆಲೆಯ ಸ್ಥಳೀಯ ಕರಕುಶಲ ಕಲೆಗಳ ವಸ್ತುಗಳನ್ನು ಕಡೆಗಣಿಸಿ, ಹೆಚ್ಚು ಬೆಲೆ ತೆತ್ತಿದರೂ ಕೈಗಾರಿಕೆಯ ಉತ್ಪಾದನೆಗಳನ್ನೇ ಕೊಂಡುಕೊಳ್ಳತೊಡಗಿದರು. ಆದರೆ ಈಗ ಕೈಗಾರಿಕೆಗಳು ಉತ್ಪಾದಿಸುವ ವಸ್ತುಗಳ ಬೆಲೆಗಳಿಗಿಂತ ಕುಶಲಕರ್ಮಿಗಳು ತಯಾರಿಸುವ ವಸ್ತುಗಳ ಬೆಲೆಗಳೇ ಜಾಸ್ತಿಯಾಗಿವೆ. ಕೈಗಾರಿಕೆಗಳು ಉತ್ಪಾದಿಸುವ ವಸ್ತುಗಳಿಗಿಂತ ಕುಶಲಕರ್ಮಿಗಳು ತಯಾರಿಸುವ ವಸ್ತುಗಳ ಬೆಲೆ ಅಧಿಕವಾದರೂ ಗ್ರಾಹಕರು ಕೊಳ್ಳುತ್ತಾರೆ. ಇದಕ್ಕೆ ಬಹುಮುಖ್ಯ ಕಾರಣ, ಕರಕುಶಲ ಕಲೆಗಳಲ್ಲಿ ವ್ಯಕ್ತವಾಗುವ ಸೌಂದರ್ಯ, ವಿನ್ಯಾಸ, ತಾಂತ್ರಿಕ ಕೌಶಲ್ಯ ಮತ್ತು ಸ್ಥಳೀಯ ಸಾಂಪ್ರದಾಯಿಕ ಪ್ರಜ್ಞೆ ಮುಂತಾದ ಮೌಲ್ಯಗಳು ಹಾಗೂ ಗುಣಗಳು.

ಆರ್ಥಿಕ ಸ್ಥಿತಿಗತಿಗಳು ಎಷ್ಟೇ ಪ್ರಬಲವಾಗಿದ್ದರೂ ಸಾಂಪ್ರದಾಯಕವಾದ ಕರಕುಶಲ ಕಲೆಗಳನ್ನು ನಾಶಮಾಡಲಾರವು. ಆಧುನಿಕತೆಯ ಪ್ರಭಾವ ಎಷ್ಟೇ ಗಾಢವಾಗಿದ್ದರೂ ಕೆಲವು ಸಮಾಜಗಳು ತಮ್ಮ ಪ್ರಾಚೀನವಾದ ಕೈಕಸುಬುಗಳನ್ನು ಇವತ್ತಿಗೂ ಉಳಿಸಿಕೊಂಡಿವೆ. ಅಮೇರಿಕಾದ ದಕ್ಷಿಣದ ಪರ್ವತದ ಪ್ರದೇಶದಲ್ಲಿ ಕುರ್ಚಿ ತಯಾರಕರು ಈಗಲೂ ತಮ್ಮದೇ

ಆದ ವಿಶಿಷ್ಟ ಬಗೆಯ ಸಾಂಪ್ರದಾಯಕ ಶೈಲಿಯ ಕುರ್ಚಿಗಳನ್ನು ತಯಾರು ಮಾಡುತ್ತಾರೆ. ಇಲ್ಲಿನ ಗ್ರಾಹಕರು ತಮ್ಮ ಉತ್ಪಾದನೆಗಳ ವಿನಿಮಯದ ಮೂಲಕ ಕುರ್ಚಿಗಳನ್ನು ಕೊಳ್ಳುತ್ತಾರೆ. ಅವರು ಕುರ್ಚಿಗಳನ್ನು ಹಣಕ್ಕೆ ಮಾರಾಟ ಮಾಡುವುದಿಲ್ಲ. ಏಕೆಂದರೆ ಕುರ್ಚಿಯ ತಯಾರಿಕೆಗೆ ಬಳಸುವ ಕಚ್ಚಾ ಸಾಮಗ್ರಿ ಆ ಪ್ರದೇಶದಲ್ಲಿ ಯಥೇಚ್ಛವಾಗಿಯೂ, ಅಗ್ಗವಾಗಿಯೂ ದೊರೆಯುತ್ತದೆ. ಈ ಪ್ರದೇಶದಲ್ಲಿ ಉತ್ತಮ ವೇತನ ದೊರೆಯುವ ಕೆಲಸಗಳು ಸಿಗುವುದಿಲ್ಲ. ಇಲ್ಲಿನ ಕುಶಲಕರ್ಮಿಗಳು ತಂತಮ್ಮ ಕಸುಬನ್ನು ಮುಂದುವರಿಸುತ್ತಾ ಅಮೆರಿಕಾದ ಇನ್ನುಳಿದ ಭಾಗಗಳ ಜನರ ಜೀವನ ಮಟ್ಟಕ್ಕಿಂತ ಕಡಿಮೆ ಜೀವನಮಟ್ಟದಲ್ಲಿ ಜೀವಿಸುತ್ತಾರೆ. ಸಮಕಾಲೀನ ಸಮಾಜದಿಂದ ಸುತ್ತುವರಿದಿರುವ, ಆದರೆ ಅದರಿಂದ ದೂರವಿರುವ ಜನಾಂಗವೊಂದು ಧಾರ್ಮಿಕ ಕಾರಣಗಳಿಂದಾಗಿ ತಮ್ಮ ಹಳೆಯ ಶೈಲಿಯ ಬದುಕಿಗೆ ಅಂಟಿಕೊಂಡಿರುವುದನ್ನು ಆರಿಸಿಕೊಂಡಿರುವುದರಿಂದ, ಕಮ್ಮಾರಿಕೆಯಂತಹ ಹಲವು ಕಸುಬುಗಳು ಇವರಲ್ಲಿ ಇನ್ನೂ ಉಳಿದುಕೊಂಡಿವೆ. ಈ ಜನಾಂಗವು ತಾವು ಕೇಳುವ ಹಳೆಯ ಶೈಲಿಯಲ್ಲಿರುವ ಕೈಗಾರಿಕೆಯ ಉತ್ಪನ್ನಗಳನ್ನು ಕೊಂಡುಕೊಳ್ಳುವುದಿಲ್ಲ. ಅಲ್ಲದೆ ಮೋಟಾರು ಚಾಲಿತ ಉಪಕರಣಗಳು ಹಾಗೂ ಯಾಂತ್ರೀಕೃತ ಸಾಧನಗಳನ್ನು ಅವರು ಬಳಸಲು ನಿರಾಕರಿಸುತ್ತಾರೆ. ಧರ್ಮ, ಸಂಪ್ರದಾಯ, ನಂಬಿಕೆ ಇವುಗಳ ಜೊತೆ ಕರಕುಶಲ ಕಲೆ ಗಾಢ ಸಂಬಂಧ ಹೊಂದಿರುತ್ತದೆ. ಈ ಜನಾಂಗ ಹಗುರವಾದ ಗಾಡಿಗಳಲ್ಲಿ ಮಾತ್ರ ಓಡಾಡುವುದು ಇದಕ್ಕೆ ನಿದರ್ಶನವಾಗಿದೆ. ಇಂತಹ ಹಗುರ ಗಾಡಿಗಳಿಗೆ ಗ್ರಾಹಕರಿಂದ ಬೇಡಿಕೆ ಇಲ್ಲ. ಇದರಿಂದ ಕೈಗಾರಿಕೆಗಳು ಈ ಗಾಡಿಯನ್ನು ತಯಾರಿಸಿ ಲಾಭಗಳಿಸಲಾರವು. ಆದ್ದರಿಂದ ಸ್ಥಳೀಯ ಕಮ್ಮಾರರಿಗೆ ಈ ಗಾಡಿ ಸಂಬಂಧವಾಗಿ ಕೆಲಸ ಮಾಡುವ ಕುಶಲಕರ್ಮಿಗಳಿಗೆ ಕೈತುಂಬಾ ಕೆಲಸ ದೊರೆತಂತಾಗಿದೆ.

ಆದರೆ ಕೆಲವು ಪ್ರದೇಶಗಳಲ್ಲಿ, ದೇಶಗಳಲ್ಲಿ ಕಚ್ಚಾ ಸಾಮಗ್ರಿಗಳು ದೊರೆಯದೆ ಸಾಂಪ್ರದಾಯಕ ಕರಕುಶಲ ಕಲೆಗಳು ಅವನತಿಯ ಅಂಚಿನಲ್ಲಿವೆ. ಇದರಿಂದ ಕುಶಲಕರ್ಮಿ ಸಾಂಪ್ರದಾಯಕ ಕಲೆಯ ವೃತ್ತಿಯನ್ನು ಕೈಬಿಟ್ಟು ತನ್ನ ಜೀವನೋಪಯೋಗಕ್ಕಾಗಿ ವಿವಿಧ ಮಾರ್ಗಗಳನ್ನು ಹಿಡಿಯಬೇಕಾಗಿದೆ. ಕೆಲವು ಕುಶಲಕರ್ಮಿಗಳು ಕೈಗಾರಿಕೆಯ ಉತ್ಪನ್ನಗಳ ರಿಪೇರಿಯಿಂದಲೇ ಜೀವನ ಸಾಗಿಸಬೇಕಾಗಿದೆ. ಆದರೆ ಎಲ್ಲಾ ಕರಕುಶಲ ಕಲೆಗಳೂ ಸಂಪ್ರದಾಯ, ನಂಬಿಕೆಗಳ ಬಲದ ಮೇಲೆ ಉಳಿದು ಬಂದಿವೆ ಎಂದು ಹೇಳಲಾಗುವುದಿಲ್ಲ. ನೇಕಾರರಿಗೆ ಹರಿದ, ಬಳಸಿ ಬಿಸಾಕಿದ ಬಟ್ಟೆಗಳನ್ನು ಸರಿಪಡಿಸಲು ಬರುವುದಿಲ್ಲ. ಆದರೂ ಅವರು ತಮ್ಮ ಕುಶಲ ಕಲೆಯ ಮುಂದುವರಿಕೆಯಲ್ಲಿ ಬೇರೆ ಬಗೆಯಲ್ಲಿ ಉಳಿದುಕೊಂಡಿದ್ದಾರೆ. ಹಾಗೆಯೇ ಬುಟ್ಟಿ ಹೆಣೆಯುವವರಿಗೆ ಹರಿದ, ಮುರಿದ, ಕಿತ್ತುಹೋದ ಬುಟ್ಟಿಗಳನ್ನು ಹೆಣೆದು ಸರಿಪಡಿಸಲು ಬರುವುದಿಲ್ಲ. ರಿಪೇರಿ ಮಾಡುವ ಮೂಲಕ ಉಳಿದುಕೊಂಡಿರುವ ಅನೇಕ ಕಸುಬುಗಳು ತಂತಮ್ಮ ಕಾರ್ಯಶೈಲಿಯನ್ನು ಬದಲಾಯಿಸಿಕೊಂಡಿವೆ. ಅಲ್ಮೆರಾ ಮಾಡುವವನು ಪೀಠೋಪಕರಣಗಳನ್ನು ಸರಿಮಾಡುವ ಮತ್ತು ಅವುಗಳನ್ನು ಅಂದವಾಗಿ ಸಜ್ಜುಗೊಳಿಸುವ ಕೆಲಸ ಮಾಡುತ್ತಿದ್ದಾನೆಯೇ ಹೊರತು ಆತ ಬೇರೇನನ್ನೂ ಮಾಡುತ್ತಿಲ್ಲ.

ಹಾಗೆಯೇ ಕಮ್ಮಾರ ಸಹ ಆಧುನಿಕ ಉಪಕರಣಗಳು ಹಾಗೂ ಸಾಮಗ್ರಿಗಳ ವೆಲ್ಡಿಂಗ್ ಮಾಡುವುದರಲ್ಲಿ ತನ್ನ ಬಹುಪಾಲು ಸಮಯವನ್ನು ಕಳೆಯುತ್ತಾನೆ.

ಇಷ್ಟೆಲ್ಲಾ ಪರಿಣಾಮಗಳಿಗೆ ಕರಕುಶಲ ಕಲೆ ಒಳಗಾದರೂ ಕುಶಲಕರ್ಮಿಗಳು ಬೇರೆ ಬೇರೆ ಬಗೆಯ ಆರ್ಥಿಕ ಹಾಗೂ ತಾಂತ್ರಿಕ ಕಾರಣಗಳ ಮೂಲಕ ತಮ್ಮ ಕಸುಬನ್ನು ಉಳಿಸಿಕೊಳ್ಳುವ ಸಾಧ್ಯತೆಯನ್ನು ಕಂಡುಕೊಳ್ಳುತ್ತಲೇ ಇದ್ದಾರೆ. ದಕ್ಷಿಣ ಭಾರತದ ಕೆಲವು ನೇಕಾರರು ಚಿಂದಿಬಟ್ಟೆಯ ಕಂಬಳಿಗಳನ್ನು ತಮ್ಮ ಮಗ್ಗಗಳಲ್ಲಿ ನೇಯುವರು. ಏಕೆಂದರೆ ಮೂಲಸಾಮಗ್ರಿಯಾದ ಚಿಂದಿ ಬಟ್ಟೆಗೆ ತಗಲುವ ವೆಚ್ಚ ಅತಿಕಡಿಮೆ ಅಥವಾ ಉಚಿತ ಎನ್ನಬಹುದು. ಆದುದರಿಂದ ಅವರು ತಮ್ಮ ಕಂಬಳಿಗಳನ್ನು ಕೈಗಾರಿಕೆಗಳು ತಯಾರಿಸಿದ ಕಂಬಳಿಗಳಿಗಳ ಬೆಲೆಗಿಂತ ಕಡಿಮೆ ಬೆಲೆಗೆ ಮಾರುತ್ತಾರೆ. ಇದು ಅವರಿಗೆ ಆರ್ಥಿಕವಾಗಿ ಅನುಕೂಲವಾಗಿದೆ. ಹೀಗೆಯೇ ಕೆಲವು ಕಸುಬುಗಳು ತಾಂತ್ರಿಕ ಕಾರಣಗಳಿಂದಾಗಿ ಉಳಿದುಕೊಂಡಿವೆ. ಏಕೆಂದರೆ ಕರಕುಶಲ ಕರ್ಮಿಯೊಬ್ಬನು ತಾನು ಮಾಡುವ ಕೆಲಸಗಳನ್ನು ಪೂರೈಸಲು ಯಂತ್ರಗಳನ್ನು ಅಭಿವೃದ್ಧಿಪಡಿಸುವ ಸಾಧ್ಯತೆ ಕಡಿಮೆ. ಯಾವುದೇ ಯಂತ್ರಗಳು ಪ್ರಸ್ತುತ ದಿನಗಳಲ್ಲಿ ಬಿದಿರಿನ ಬುಟ್ಟಿ ಹೆಣೆಯುವುದಿಲ್ಲ. ಆದ್ದರಿಂದ ಬಿದಿರಿನ ಬುಟ್ಟಿ ಹೆಣೆಯುವವರು ಕೈಗಾರಿಕೆಯ ಉತ್ಪನ್ನಗಳಾದ ಕಾಗದ, ಪ್ಲಾಸ್ಟಿಕ್‌ನ ಬುಟ್ಟಿಗಳನ್ನು ಬೇರೆ ಬೇರೆ ಮೂಲಗಳಿಂದ ಆಮದು ಮಾಡಿಕೊಂಡು ಮಾರಿ ಜೀವನ ನಡೆಸುತ್ತಾ ಉತ್ತಮ ಸ್ಥಿತಿಯಲ್ಲಿದ್ದಾರೆ. ಇದು ಸ್ಥಳೀಯ ಕರಕುಶಲ ಕಲೆಗಾರರು ಸಿದ್ಧಪಡಿಸುವ ವಸ್ತುವಿಗಿಂತ ಕಡಿಮೆ ದರದಲ್ಲಿ ಸಿಗುವುದರಿಂದ ಗ್ರಾಹಕರೂ ಸಹಜವಾಗಿ ಆದರತ್ತ ಆಸಕ್ತರಾಗಿರುತ್ತಾರೆ. ಇದರಿಂದ ಸ್ಥಳೀಯ ಕರಕುಶಲ ಕಲೆ ಸಹಜವಾಗಿ ಅವಸಾನದ ಹಾದಿ ಹಿಡಿಯುತ್ತದೆ. ಇದರ ಉಳಿವಿಗೆ ಸರ್ಕಾರ, ಸಂಘಸಂಸ್ಥೆಗಳು ಪ್ರೋತ್ಸಾಹ ನೀಡಬೇಕಾದ ಅವಶ್ಯಕತೆ ಇದೆ.

ಪ್ರಸ್ತುತ ಕಾಲದಲ್ಲಿ ಹಲವು ಪ್ರದೇಶಗಳಲ್ಲಿ ಕರಕುಶಲ ಕಲೆಗಳು ಉಳಿದು ಬಂದಿರಲು ಬಹುಮುಖ್ಯವಾದ ಕಾರಣವೆಂದರೆ ಕೈಗಾರಿಕೆಯ ಉತ್ಪನ್ನ ವಸ್ತುಗಳಿಗೆ ಇವುಗಳನ್ನು ಹೋಲಿಸಲಾಗದಿದ್ದರೂ ಕೌಶಲ್ಯದ ದೃಷ್ಟಿಯಿಂದಲೂ ಹೊರತಾಗಿರುವ ಕರಕುಶಲ ವಸ್ತುಗಳನ್ನು ಹೊಂದುವುದು ಬಹಳಷ್ಟು ಜನರಿಗೆ ಪ್ರತಿಷ್ಠೆಯ, ಘನತೆಯ ವಿಷಯವಾಗಿದೆ. ಇದರ ಪರಿಣಾಮವಾಗಿ ಪ್ರವಾಸಿಗರು ಹೆಚ್ಚು ಬರುವ ಪ್ರವಾಸಿ ತಾಣಗಳಲ್ಲಿ ಕರಕುಶಲ ವಸ್ತುಗಳ ಅಂಗಡಿಗಳು ಉತ್ತಮ ಸ್ಥಿತಿಯಲ್ಲಿವೆ. ಆದರೆ ಇದರಿಂದ ಅಂಗಡಿಯ ಯಜಮಾನನಿಗೆ ಲಾಭವೇ ಹೊರತು, ಸ್ಥಳೀಯ ಕುಶಲ ಕರ್ಮಿಗಳಿಗೆ ಸಿಗುವ ಲಾಭ ಕಡಿಮೆಯೇ ಎಂದು ಹೇಳಬಹುದು. ಸರ್ಕಾರದ ಅಧೀನದಲ್ಲಿರುವ ಸಹಕಾರ ಸಂಘಗಳ ಮೂಲಕ ಕುಶಲಕರ್ಮಿ ತಾನು ಸಿದ್ಧಪಡಿಸಿದ ವಸ್ತುವನ್ನು ಮಾರಲು ಅವಕಾಶ ಸಿಕ್ಕಾಗ ಅವನಿಗೆ ಪ್ರಯೋಜನವಾಗಬಹುದು. ಆಗ ಕುಶಲಕರ್ಮಿಗಳು ತಮ್ಮ ವಸ್ತುಗಳಿಗೆ ಒಳ್ಳೆಯ ಪ್ರೋತ್ಸಾಹ, ಸಹಕಾರ ಸಿಕ್ಕಿ ಅವನು ತನ್ನ ಸಾಂಪ್ರದಾಯಿಕ ಕಲೆಯನ್ನು ಉಳಿಸಿ ಬೆಳೆಸಿಕೊಂಡು ಹೋಗಬಲ್ಲ. ಆದರೆ ವಾಣಿಜ್ಯದ ಬೆನ್ನುಹತ್ತಿಹೋದ ಕರಕುಶಲ ಕಲೆಗಳು ಯಾವುದೇ ಪರಂಪರೆಯನ್ನು ಗಣನೀಯವಾದ ರೀತಿಯಲ್ಲಿ ಪ್ರತಿನಿಧಿಸುವುದರ ಬಗ್ಗೆ ಅನುಮಾನ ಇದ್ದೇ ಇರುತ್ತದೆ. ಎಷ್ಟೋ ಸಂದರ್ಭಗಳಲ್ಲಿ ಕುಶಲಕರ್ಮಿಗಳು ತಮ್ಮ ಕಸುಬನ್ನು ಶಾಲೆಗಳಲ್ಲೋ ಅಥವಾ ಇನ್ನಿತರ ವ್ಯವಸ್ಥಿತ ತರಬೇತಿ ಕೇಂದ್ರಗಳ

ತಂತ್ರಜ್ಞಾನ ಮತ್ತು ವಿಜ್ಞಾನದ ಹೊಸ ಚಿಗುರನ್ನು ಕಾಣಲು ಸಾಧ್ಯವಾಗುತ್ತದೆ ಎಂಬ ಅಂಶವನ್ನು ನಾವು ಈ ಲೇಖನದಲ್ಲಿ ಕಾಣಬಹುದಾಗಿದೆ.

## ಮಾದರಿ ಪ್ರಶ್ನೆಗಳು

1. "ಕರಕುಶಲ ಕಲೆಗಳು ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನದ ತಾಯಿಬೇರು" ಈ ವ್ಯಾಖ್ಯಾನವನ್ನು ನಿದರ್ಶನಗಳ ಮುಖಾಂತರ ಚರ್ಚಿಸಿರಿ.
2. ಭಾರತೀಯ ಕರಕುಶಲ ಕಲೆಗಳಿಗೆ ಯಾವ ಕಾಲ/ಸಂದರ್ಭದಿಂದ ಅಪಾರ ಬೇಡಿಕೆ ಇದೆ?
3. ಭಾರತದಲ್ಲಿ ತಯಾರಾದ ಕರಕುಶಲ ವಸ್ತುಗಳನ್ನು ಯಾವ ಯಾವ ದೇಶಗಳು ಹೆಚ್ಚಾಗಿ ಕೊಳ್ಳುತ್ತಿದ್ದವು?
4. ಭಾರತದಿಂದ ರಫ್ತಾಗುತ್ತಿದ್ದ ವಿವಿಧ ಬಗೆಯ ಕರಕುಶಲ ವಸ್ತುಗಳ ಬಗ್ಗೆ ವಿದೇಶಿ ಬರಹಗಳಲ್ಲಿ ಪ್ರಸ್ತಾಪಿಸಿರುವ ಬರಹಗಾರರುಗಳು ಯಾರು?
5. ಕರಕುಶಲ ಕಲೆಗಳ ಮುಖಾಂತರ ವ್ಯಕ್ತವಾಗುವ ವ್ಯಕ್ತಿ / ಜನಾಂಗಗಳ ಗುಣಲಕ್ಷಣಗಳು ಯಾವುವು?
6. ಕನ್ನಡನಾಡಿನ ವಿವಿಧ ಬಗೆಯ ಕರಕುಶಲ ಕಲೆಗಳ ಹೆಸರುಗಳನ್ನು ಪಟ್ಟಿಮಾಡಿ.
7. ಕೈಗಾರಿಕಾ ಕ್ರಾಂತಿಯಿಂದ ಕರಕುಶಲ ಕಲೆಗಳ ಮೇಲೆ ಯಾವ ರೀತಿಯ ಪರಿಣಾಮಗಳು ಉಂಟಾದವು?
8. "ಆರ್ಥಿಕ ಸ್ಥಿತಿಗತಿಗಳು ಎಷ್ಟೇ ಪ್ರಬಲವಾಗಿದ್ದರೂ ಸಾಂಪ್ರದಾಯಿಕವಾದ ಕರಕುಶಲ ಕಲೆಗಳನ್ನು ನಾಶ ಮಾಡಲಾರವು" ಈ ಹೇಳಿಕೆಯನ್ನು ನಿದರ್ಶನಗಳ ಮುಖಾಂತರ ಚರ್ಚಿಸಿರಿ.
9. ಕರಕುಶಲ ಕಲೆಗಳ ಆದಾಯದಿಂದ ಉತ್ತಮ ಜೀವನ ನಡೆಸುತ್ತಿರುವ ಅಮೆರಿಕ ದ ಪ್ರದೇಶವೊಂದರ ಜನಾಂಗದ ಬಗ್ಗೆ ಬರೆಯಿರಿ.
10. ಧರ್ಮ, ಸಂಪ್ರದಾಯ ಮತ್ತು ನಂಬಿಕೆ ಇವುಗಳ ಜೊತೆ ಕರಕುಶಲ ಕಲೆಗಳು ಯಾವ ರೀತಿಯ ಸಂಬಂಧವನ್ನು ಹೊಂದಿವೆ?
11. ಪ್ರಸ್ತುತ ಸನ್ನಿವೇಶದಲ್ಲಿ ಕೈಗಾರಿಕರಣ ಮತ್ತು ಆಧುನಿಕತೆಯ ಅಬ್ಬರದ ಮಧ್ಯೆಯೂ ಕರಕುಶಲ ಕಲೆಗಳು ಅಸ್ತಿತ್ವದಲ್ಲಿರಲು ಕಾರಣಗಳೇನು?
12. "ಕರಕುಶಲ ಕಲೆಗಳ ಉದ್ಯೋಗದಲ್ಲಿ ವೈಯಕ್ತಿಕ ಸಂತೋಷವಿದೆ - ಇಲ್ಲಿ ಆದಾಯ ಬರೀ ಜೀವನಕ್ಕೆ ಅಗತ್ಯತೆಯಾಗಿದೆ" ಈ ವ್ಯಾಖ್ಯಾನವನ್ನು ನಿದರ್ಶನಗಳ ಮುಖಾಂತರ ವಿವರಿಸಿ.